ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2020 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 12
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | September 2020 | Monthly

## ಆದರ್ಶ ಶಿಕ್ಷಕರಿಗೆ ಪ್ರಣಾಮಗಳು




ಡಾ॥ ಎಸ್. ರಾಧಾಕೃಷ್ಣನ್



ಪ್ರೊ. ಟಿ. ಎಸ್. ವೆಂಕಣ್ಣಯ್ಯ



ಡಾ॥ ಎ. ಆರ್. ಕೃಷ್ಣಶಾಸ್ತ್ರಿ



ಪ್ರೊ. ಜಿ. ವೆಂಕಟಸುಬ್ಬಯ್ಯ

A Journal of Karnataka State Secondary Teachers' Association

# ಮಾದಕ ವಸ್ತುಗಳ ಮೋಹಕ ಬಲೆಯಿಂದ ಯುವ ಪೀಳಿಗೆಯ ರಕ್ಷಣೆ ಹೇಗೆ ಸಾಧ್ಯ?

ಮಾದಕ ವಸ್ತುಗಳ ಮಾದಕ ಜಾಲದ ಮೋಹಕ ಬಲೆಯಿಂದ ಯುವ ಪೀಳಿಗೆಯ ರಕ್ಷಣೆ ಮಾಡಬೇಕಾದುದು ಪೋಷಕರಿಗೆಷ್ಟು ಜವಾಬ್ದಾರಿಯಿದೆಯೋ, ಅದರೆಡರಷ್ಟು ಜವಾಬ್ದಾರಿ ಶಿಕ್ಷಕರಿಗಿದೆಯೆಂದರೆ ತಪ್ಪಾಗಲಾರದು. ರಾಷ್ಟ್ರದ ಪುನರ್ನಿರ್ಮಾಣದ ಜವಾಬ್ದಾರಿ ಹೊತ್ತಿರುವ ಶಿಕ್ಷಕರು ಜವಾಬ್ದಾರಿಯುತ ಪ್ರಜೆಗಳನ್ನು ಸೃಷ್ಟಿಸಬೇಕಾದುದು ಅತ್ಯಂತ ಅವಶ್ಯಕ ಮತ್ತು ಅನಿವಾರ್ಯವೂ ಹೌದು.

ಇತ್ತೀಚಿಗೆ ಸುದ್ದಿವಾಹಿನಿಗಳಲ್ಲಿ ಬಿತ್ತರವಾಗುತ್ತಿರುವ ಸುದ್ದಿಗಳನ್ನು ಗಮನಿಸಿದರೆ ಪ್ರತಿಯೊಬ್ಬ ಜವಾಬ್ದಾರಿಯುತ ಶಿಕ್ಷಕರು ಯುವಪೀಳಿಗೆ ನಡೆಯುತ್ತಿರುವ ದಾರಿಯಾದರೂ ಯಾವುದು? ಆಯ್ಕೆ ಮಾಡಿಕೊಂಡಿರುವ ಗುರಿಯಾದರೂ ಏನು? ಎಂಬುದನ್ನು ಅನೇಕಾನೇಕ ಬಾರಿ ಚಿಂತಿಸದೇ ಇರರು. ನಮ್ಮ ಯುವಪೀಳಿಗೆಯನ್ನು ಈ ಮಾದಕ, ಮೋಹಕ ಬಲೆಯಿಂದ ರಕ್ಷಿಸುವುದು ಹೇಗೆ? ಎಂಬುದನ್ನು ಯೋಚಿಸಿಯೇ ಇರುತ್ತೀರಿ.

ಈ ಕೆಳಗಿನ ಅಂಶಗಳನ್ನು ಶಿಕ್ಷಕರು ಪಾಲಿಸುವುದರೊಂದಿಗೆ ಸ್ವಲ್ಪಮಟ್ಟಿಗಾದರೂ ಯುವಪೀಳಿಗೆಯನ್ನು ಈ ದುಶ್ಚಟದಿಂದ ರಕ್ಷಿಸಬಹುದೇನೋ?

- ಶಾಲೆ-ಕಾಲೇಜುಗಳಲ್ಲಿ ಶಿಕ್ಷಕರು ಮಾದಕ ವಸ್ತುಗಳ ವ್ಯಸನದಿಂದಾಗುವ ಅನಾಹುತಗಳನ್ನು ಸವಿವರವಾಗಿ ವಿದ್ಯಾರ್ಥಿಗಳಿಗೆ ತಿಳಿಸಬೇಕು.
- ವಿದ್ಯಾರ್ಥಿಗಳನ್ನು ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು.
- ವಿದ್ಯಾರ್ಥಿಗಳಲ್ಲಿರುವ ರಚನಾತ್ಮಕ ಶಕ್ತಿಯನ್ನು ಉತ್ತಮ ಕಾರ್ಯಗಳಲ್ಲಿ ನಿಯೋಜಿಸಬೇಕು.
- ವಿದ್ಯಾಭ್ಯಾಸದ ಕಡೆಗೆ ಅವರು ಹೆಚ್ಚು ಗಮನ ಕೊಡುವಂತೆ ಆಸಕ್ತಿದಾಯಕ ಬೋಧನೆ ಮಾಡಬೇಕು.
- ಶಾಲಾ ಆವರಣದಲ್ಲಿ ಒಳ್ಳೆಯ ವಾತಾವರಣವನ್ನು ಸೃಷ್ಟಿಸಬೇಕು.
- ದಿನನಿತ್ಯದ ವರ್ತನೆಯಲ್ಲಿ ಸಂದೇಹ ಬಂದ ವಿದ್ಯಾರ್ಥಿಗಳ ಜೊತೆ ಆಪ್ತ ಸಮಾಲೋಚನೆ ಮಾಡಿ, ಅವರ ವರ್ತನೆಯಲ್ಲಿನ ಬದಲಾವಣೆಗೆ ಕಾರಣವನ್ನು ಕಂಡುಕೊಂಡು, ಅವರ ಸಮಸ್ಯೆಗಳಿಗೆ ಆದಷ್ಟು ಸಮಾಧಾನ ನೀಡಲು ಪ್ರಯತ್ನಿಸಬೇಕು.
- ಶಾಲೆಯ ಆಸುಪಾಸಿನ ಸಣ್ಣಪುಟ್ಟ ಅಂಗಡಿಗಳಲ್ಲಿ ಇಂತಹ ಮಾದಕ ವಸ್ತುಗಳು ವಿದ್ಯಾರ್ಥಿಗಳಿಗೆ ಸಿಗದಂತೆ ನೋಡಿಕೊಳ್ಳಬೇಕು.
- ಅವಶ್ಯವಾದರೆ ಆರೋಗ್ಯ ಇಲಾಖೆ ಹಾಗೂ ಪೋಲೀಸ್ ಇಲಾಖೆಯ ಸಹಕಾರ ಪಡೆದುಕೊಳ್ಳಬೇಕು.
- ವಿದ್ಯಾರ್ಥಿಗಳ ಮನೆಯ ವಾತಾವರಣದ ಬಗ್ಗೆ ಶಿಕ್ಷಕರಿಗೆ ಮಾಹಿತಿ ಇದ್ದರೆ ಅನುಕೂಲ. ಮನೆಯಲ್ಲಿಯೂ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲವಾಗುವಂತಹ ವಾತಾವರಣವನ್ನು ಕಲ್ಪಿಸಿದರೆ ಒಳ್ಳೆಯದು.
- ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಆಗಾಗ ಪೋಷಕರ ಸಭೆ ನಡೆಸಬೇಕು.
- ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು ಸ್ನೇಹಿತರಂತೆ ವರ್ತಿಸಬೇಕು.
- ದೇಶದ ಇತಿಹಾಸ, ಸಂಸ್ಕೃತಿ, ದೇಶದ ಮಹಾನ್ ನಾಯಕರ ಜೀವನದ ಪರಿಚಯ ಮಾಡಿಕೊಡುತ್ತಿರಬೇಕು.
- ಉತ್ತಮ ಕಥೆ, ಕಾದಂಬರಿಗಳನ್ನು ಓದುವ ಹವ್ಯಾಸ ಬೆಳೆಸಬೇಕು.
- ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಅನೇಕ ಸ್ಪರ್ಧೆಗಳನ್ನು ಮಾಡಿ, ಪ್ರೋತ್ಸಾಹ ನೀಡಲು ಬಹುಮಾನಗಳನ್ನು ನೀಡಬೇಕು.
- ವಿದ್ಯಾರ್ಥಿಗಳ ಸದಾಭಿರುಚಿಯ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಶಾಲೆಯಲ್ಲಿ ರೂಪಿಸಬೇಕು.
- ಶಾಲಾ-ಕಾಲೇಜುಗಳಲ್ಲಿ ಉತ್ತಮ ಗ್ರಂಥಾಲಯವಿರಬೇಕು.
- ವಿದ್ಯಾರ್ಥಿಗಳಲ್ಲಾಗುವ ವರ್ತನೆಯ ಬದಲಾವಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ, ಸರಿಯಾದ ಮಾರ್ಗದರ್ಶನ ಮಾಡುತ್ತಿರಬೇಕು.
- ಜೀವನದಲ್ಲಿ ಸಂತೋಷಪಡಲು ನೂರಾರು ಉತ್ತಮ ದಾರಿಗಳಿವೆ. ಸ್ನೇಹಿತರೊಂದಿಗೆ ಕುಶಲೋಪರಿ, ಉತ್ತಮ ಪುಸ್ತಕ ಓದುವುದು, ಸಂಗೀತ ಕೇಳುವುದು, ಒಳ್ಳೆಯ ಚಲನಚಿತ್ರಗಳ ವೀಕ್ಷಣೆ, ಸ್ನೇಹಿತರೊಂದಿಗೆ ಆಟೋತಗಳಲ್ಲಿ ತೊಡಗುವ ಮೂಲಕ ವಿದ್ಯಾರ್ಥಿಗಳು ಮನೋರಂಜನೆ ಪಡೆಯಲು ಮಾರ್ಗದರ್ಶನ ಮಾಡಬೇಕು.

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಉತ್ತಮ ಪ್ರಜೆಗಳನ್ನು ರೂಪಿಸಲು ಬೇಕಾದ ಜವಾಬ್ದಾರಿ ನಮ್ಮೆಲ್ಲರದಲ್ಲವೇ?

ಸಂಪಾದಕ

## ಸೂಕ್ತಿ

ಗೀತೀ ಶೀಘ್ರೀ ಶಿರಃ ಕಂಪೀ
ಯಥಾ ಲಿಖಿತ ಪಾಠಕಃ ।
ಅನರ್ಥಜ್ಞಃ ಅಲ್ಪಕಂಠಶ್ಚ
ಷಡೇತೇ ಪಾಠಕಾಧಮಾಃ ॥

ಪಾಠ ಬೋಧಿಸುವಾಗ ಅವಶ್ಯವಿಲ್ಲದೆ ಇರುವಲ್ಲಿ ರಾಗಾಲಾಪನೆ ಮಾಡಬಾರದು. ಅತಿಯಾದ ಅವಸರ ಇರಬಾರದು. ಮತ್ತೆ ಮತ್ತೆ ತಲೆ ಆಡಿಸುತ್ತಿರಬಾರದು. ಪುಸ್ತಕದಲ್ಲಿರುವ ವಿಷಯ ವಾಕ್ಯಗಳು-ಅಕ್ಷರಗಳು ಅಕಸ್ಮಾತ್ ತಪ್ಪಾಗಿದ್ದರೂ ಯಥಾಸ್ಥಿತವಾಗಿ ಹಾಗೆಯೇ ಓದಬಾರದು. ಅರ್ಥವನ್ನು ತಿಳಿದುಕೊಳ್ಳದೆ ಮತ್ತು ಅಪಾರ್ಥವಾಗುವಂತೆ ಓದಬಾರದು. ಧ್ವನಿಯಲ್ಲಿ ಕ್ಷೀಣತೆ ಇರಬಾರದು. ಈ ಆರು ಸಂಗತಿಗಳಿಗೆ ವಿರುದ್ಧವಾಗಿದ್ದರೆ ಅಂಥವರು ಪಾಠ ಹೇಳಲು ಯೋಗ್ಯರಾಗುವುದಿಲ್ಲ.

- ಪಾಣಿನೀಯ ಶಿಕ್ಷಾ

## ಪರಿವಿಡಿ


- ಶಿಕ್ಷಕರೆಂದರೇ... 3
- ಆದರ್ಶ ಶಿಕ್ಷಕರು – ನಾವೂ ಹೀಗಾಗಬಹುದೆ? 4
- ಮೊದಲು ನೆನೆದೇವು ಅಕ್ಷರದವ್ವನಾ... 6
- ಅಮೂಲ್ಯ ರತ್ನ ಯಾವುದು? 7
- ಮೌಢ್ಯದ ಪರಧಿಯಿಂದ ಮೂಲ ತತ್ತ್ವದೆಡೆಗೆ ಒಂದು ಪಯಣ 8
- ರಾಷ್ಟ್ರೀಯ ಶಿಕ್ಷಣ ನೀತಿ 2020 ವಿಚಾರ ಗೋಷ್ಠಿ – ಬೆಳಗಾವಿ, ರಾಮನಗರ 10
- ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಶ್ರೀ ಜೆ. ಪಿ. ಸಿಂಘಾಲರವರ ದೃಷ್ಟಿಕೋನ 11
- ಹೊಸ ಶಿಕ್ಷಣ ನೀತಿ ವಿಚಾರ ಸಂಕಿರಣ 12

# ಶಿಕ್ಷಕರೆಂದರೇ...

**ಭರತ್ ಕುಮಾರ್ ಟಿ. ಎ.**
**ಶಿಕ್ಷಕರು, ಕನಕಪುರ**



ಈ ರೇ... ಎಂಬುದು ನಮ್ಮಲ್ಲಿ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಹಾಗಾದರೆ ಶಿಕ್ಷಕರೆಂದರೆ ಯಾರು ಎಂಬುದಕ್ಕೆ ನನ್ನ ಉತ್ತರ ಶ್ರೀ ವಿಷ್ಣುವಿಗೆ ಹೇಗೆ ದಶಾವತಾರಗಳಿವೆಯೋ ಹಾಗೆಯೇ ಈ ಗುರುವಿಗೂ ಬಹು ಅವತಾರಗಳಿವೆ. ಒಬ್ಬ ಗುರು ಮಕ್ಕಳ 2ನೇ ಪೋಷಕನಾಗಿ, ಮಾರ್ಗದರ್ಶಕನಾಗಿ ಸಲಹೆಗಾರನಾಗಿ ಕಾರ್ಯ ನಿರ್ವಹಿಸುತ್ತಾರೆ. ಹೀಗೆ ಈ ಬಹು ಅವತಾರಗಳನ್ನು ನಿಭಾಯಿಸುವವರೇ ನಿಜವಾದ ಗುರು.

ಒಂದು ರಾಷ್ಟ್ರದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಗಣನೀಯವಾದದ್ದು. ಆದರೆ ಹಿಂದಿಗಿಂತ ಇಂದಿನ ಮಕ್ಕಳ ಯುವ ಸಮೂಹ ಕೆಲವೊಂದು ವಿಚಾರಗಳಲ್ಲಿ ದಾರಿ ತಪ್ಪುತ್ತಿರುವಾಗ ಹಾಗೂ ಭಾರತೀಯ ಸಮಾಜದ ಮೂಲ ಆಶಯದಂತೆ, ಸಹಿಷ್ಣುತೆ, ವ್ಯಕ್ತಿಗೌರವ, ದೇಶಭಕ್ತಿ ಮೊದಲಾದ ಸದ್ಗುಣಗಳು ಕಣ್ಮರೆಯಾಗುತ್ತಿರುವಾಗ ಶಿಕ್ಷಕರು ತಮ್ಮ ಪ್ರಯತ್ನದಲ್ಲಿ ಮತ್ತಷ್ಟು ಕ್ರಿಯಾಶೀಲರಾಗಬೇಕೆಂಬುದು ನನ್ನ ಆಶಯ. ಸರಕಾರದ ನಿಯಮಗಳು ನಮ್ಮ ವ್ಯವಸ್ಥೆ, ಕಾಯ್ದೆ, ಕಾನೂನುಗಳಲ್ಲಿ ಏನೇ ದೋಷವಿದ್ದರು ಉತ್ತಮ ವಿದ್ಯಾರ್ಥಿಗಳನ್ನು ದೇಶಕ್ಕೆ ಕೊಡುಗೆ ನೀಡುವ ಜವಾಬ್ದಾರಿ ನಮ್ಮ ಮೇಲೆಯೇ ಇದೆ.

## ಈ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿಯೇನು...!

ನಮ್ಮ ದೇಶದಲ್ಲಿ ಶೇ 65ಕ್ಕೂ ಹೆಚ್ಚಿನ ಜನರು ಕೃಷಿಯನ್ನು ಅವಲಂಬಿಸಿ ತಮ್ಮ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಇಷ್ಟು ಸಂಖ್ಯೆಯಲ್ಲಿ ಕೃಷಿಕರಿದ್ದರೂ, ಅವರೆಲ್ಲ ಕೃಷಿಯಲ್ಲಿ ಅಷ್ಟು ಮುಂದುವರೆದಿಲ್ಲ. ಕಾರಣ ವ್ಯವಸಾಯ ಚಟುವಟಿಕೆಗಳಲ್ಲಿ ಸಾಂಪ್ರದಾಯಿಕ ವಿಧಾನಗಳನ್ನು ಬಳಸುತ್ತಿದ್ದೇವೆ. ಹಾಗೂ ಸರಿಯಾದ ಮಾಹಿತಿಯ ಕೊರತೆಯಿದೆ. ಹೀಗೆ ನಮ್ಮ ಶೈಕ್ಷಣಿಕ ಕ್ಷೇತ್ರದಲ್ಲೂ ನಾವು ಹಳೆಯ ವಿಧಾನಗಳನ್ನೇ ಅನುಸರಿಸುತ್ತಿದ್ದೇವೆ. ಆದರೆ ಶಿಕ್ಷಿತರಾದ ನಾವು ಕಾಲಕಾಲಕ್ಕೆ update ಆಗುತ್ತಿರಬೇಕು. ಈ ಆಧುನಿಕ ಯುಗದಲ್ಲಿ ಕಂಪ್ಯೂಟರ್, ಸಾಮಾಜಿಕ ಜಾಲತಾಣಗಳು, ರೇಡಿಯೋ, ದೂರದರ್ಶನಗಳಷ್ಟೇ ಅಲ್ಲದೆ ಬಹುತೇಕ ಶಿಕ್ಷಣಕ್ಕೆ ಸಂಬಂಧಿಸಿದ app ಗಳಿವೆ. ಇವುಗಳ ಸದುಪಯೋಗ ಪಡಿಸಿಕೊಳ್ಳಬೇಕು. ಆದರೆ ಇಲ್ಲೂ ಯಥಾವತ್ತಾಗಿ ಅನುಕರಣೆ ಮಾಡುವ ಬದಲು ನಾವು ವಿಚಾರಗಳನ್ನು ತಿಳಿದು, ನಮ್ಮ ಅನುಭವಗಳನ್ನು ಸೇರಿಸಿ ಮಕ್ಕಳಿಗೆ ತಿಳಿಸಬೇಕು.

"ಬೆಳೆಯುವ ಪೈರು ಮೊಳಕೆಯಲ್ಲಿ" ನಮ್ಮ ಅಮ್ಮ ಯಾವಾಗಲೂ ಈ ಗಾದೆಮಾತನ್ನು ಹೇಳುತ್ತಾ – ಈ ಭೂತಾಯಿಯ ಒಡಲಿಗೆ ಹಾಕಿದ ಬೀಜ ಎಂದಿಗೂ ಕೈ ಬಿಡಲ್ಲ, ಪ್ರತಿಫಲ ಸಿಕ್ಕೆ ಸಿಗುತ್ತೆ ಅಂತಾರೆ. ಅದರಲ್ಲೂ ಒಳ್ಳೆಯ ಬೀಜ ಒಳ್ಳೆಯ ಫಲವನ್ನೇ ಕೊಡುತ್ತೆ. ಹಾಗೆಯೇ ಶಿಕ್ಷಕರು ತಮ್ಮ ಜ್ಞಾನಧಾರೆಯಿಂದ ಒಬ್ಬ ಉತ್ತಮ ವಿದ್ಯಾರ್ಥಿಯನ್ನು ಸಮಾಜಕ್ಕೆ ಕೊಟ್ಟರೆ, ಆತನು ಮುಂದೆ ಒಳ್ಳೆಯ ಪ್ರತಿಫಲವನ್ನೇ ಕೊಡುತ್ತಾನೆ. ಈ ರೀತಿಯ ಸೇವೆ ಸಲ್ಲಿಸೋ ಸೇವಾಮನೋಭಾವನೆ ನಮ್ಮಲ್ಲಿರಬೇಕಷ್ಟೆ.

"Simple living High thinking" ಎಂಬ ಗಾಂಧೀಜಿಯವರ ಮಾತನ್ನು ಶಿಕ್ಷಕರಾದ ನಾವು ಕೂಡ ನಮ್ಮ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಈ ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ಹೋಗುವಾಗ ಅವರ ವಿಲಾಸಭರಿತ ಜೀವನ ಶೈಲಿಯನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ. ಅದರ ಪರಿಣಾಮವಾಗಿ ನಮ್ಮಲ್ಲೂ ಬಹುತೇಕರು ಆ ರೀತಿಯ ಜೀವನವನ್ನು ನಡೆಸುವುದರ ಬಗ್ಗೆ ಯೋಚಿಸಿ ಶಿಕ್ಷಕ ವೃತ್ತಿಯಲ್ಲಿ ದೊರೆಯುವ ವೇತನ ಸಾಲುವುದಿಲ್ಲ ಎಂಬಂತೆ ಆಲೋಚಿಸುತ್ತಾರೆ. ಈ ನಿರಾಸೆಯಲ್ಲೆ ಕೆಲವರು ಅನ್ಯ ಮಾರ್ಗಗಳಿಂದ ಹಣ ಸಂಪಾದಿಸಿ ಅದರ ರಕ್ಷಣೆಗಾಗಿ ಸಮಯ ಮೀಸಲಿಡುತ್ತಾರೆ. ನಮ್ಮ ಉನ್ನತ ಆಲೋಚನೆಗಳಿಂದ ದೇಶಕ್ಕೆ ಒಬ್ಬ ಒಳ್ಳೆಯ ಪ್ರಜೆಯನ್ನು ನೀಡಿ, ಆತನ ಸಾಧನೆಯಿಂದ ಹತ್ತಾರು ಜನರಿಗೆ ಸಹಾಯವಾದಾಗ ನನ್ನ ಶಿಷ್ಯ ಎಂದು ಹೆಮ್ಮೆಯಿಂದ ಹೇಳಬಹುದು.

**ಈ ಹೆಜ್ಜೆಯಲ್ಲಿ ಶಿಕ್ಷಕರಾದ ನಾವು ಅನುಸರಿಸಬೇಕಾದ ಕೆಲವು ಕ್ರಮಗಳು.**

- ಪೂರ್ವಸಿದ್ಧತೆಯೊಂದಿಗೆ ತರಗತಿಗೆ ಹೋಗುವುದು.
- ತಿಳಿದ ಹೊಸ ವಿಚಾರಗಳನ್ನು, ಪ್ರಯೋಗಗಳನ್ನು ಮೊದಲು ನಮ್ಮ ಮೇಲೆಯೇ ಪ್ರಯೋಗಿಸೋಣ.
- ಮಕ್ಕಳಲ್ಲಿ ಉನ್ನತ ಕನಸುಗಳನ್ನು ಬಿತ್ತೋಣ.
- ನಮ್ಮ ಹಾಗೂ ಈಗಿನ ವಿದ್ಯಾರ್ಥಿಗಳ ನಡುವಿನ ಪೀಳಿಗೆಯ ಅಂತರವನ್ನು ತಿಳಿದು ಅವರ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಉತ್ತರಿಸೋಣ
- ವಿದ್ಯಾರ್ಥಿಗಳಲ್ಲಿ ಕುತೂಹಲ ಭರಿತ ಪ್ರಶ್ನೆಗಳನ್ನು ಕೇಳುವ ಕಲೆಯನ್ನು (ಸಾಮರ್ಥ್ಯವನ್ನು) ಉತ್ತೇಜಿಸೋಣ.
- ಮಗುವಿನ ಕೌಟುಂಬಿಕ ಹಿನ್ನಲೆ, ಮನೋ ಸಾಮರ್ಥ್ಯ ತಿಳಿದು ಬೋಧಿಸುವುದು.
- ಪಠ್ಯಕ್ರಮ ಪೂರ್ಣಗೊಳಿಸುವುದೊಂದೆ ನಮ್ಮ ಗುರಿಯಾಗದಿರಲಿ.
- ಟೀಕೆಗಳಿಗೆ ಅಂಜದೆ ಮಕ್ಕಳನ್ನು ಪ್ರೀತಿಸೋಣ, ಗೌರವಿಸೋಣ, ಪ್ರೀತಿಯನ್ನು ಹಂಚಿ ಪ್ರೀತಿಯನ್ನು ಪಡೆಯೋಣ.
- ಅನುಭವವೇ ಶಿಕ್ಷಣ ಎಂಬಂತೆ ನಮ್ಮ ಅನುಭವಗಳ ಆಧಾರದ ಮೇಲೆ ನಮ್ಮ ಐಚ್ಛಿಕ ವಿಷಯಕ್ಕೆ ಸೀಮಿತವಾಗದೇ ಎಲ್ಲ ವಿಚಾರಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡೋಣ

ಇದೆಲ್ಲದಕ್ಕೂ ಮುಖ್ಯವಾಗಿ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಪ್ರೀತಿಸುವ ಗುಣ ನಮ್ಮಲ್ಲಿರಬೇಕು. ಅಲ್ಲಿ ಭಯ, ಭಕ್ತಿ, ಪ್ರೀತಿ, ವಿಶ್ವಾಸ, ವಿಧೇಯುತೆ ಹಾಗೂ ಸ್ನೇಹಪರತೆ ಎಲ್ಲವೂ ಇರಬೇಕು. ಎಸ್.ಎಸ್.ಎಲ್.ಸಿ ಫಲಿತಾಂಶ ಬಂದಾಗ ಒಂದು ಶಾಲೆಯ ಮುಖ್ಯೋಪಾಧ್ಯಾಯರು ಒಬ್ಬ ವಿದ್ಯಾರ್ಥಿಯನ್ನು ತಮ್ಮ ಹೆಗಲ ಮೇಲೆ ಕೂರಿಸಿಕೊಂಡು ಸಂಭ್ರಮಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಮಕ್ಕಳು ನಾವು ಹೇಳುವುದನ್ನು ಕೇಳುವುದಿಲ್ಲ, ಬದಲಿಗೆ ನಾವು ಮಾಡುವುದನ್ನು ಮಾಡುತ್ತಾರೆ. ಆದ್ದರಿಂದ ನುಡಿದಂತೆ ನಡೆಯುವುದು ನಮ್ಮ ಕರ್ತವ್ಯವಾಗಿದೆ. ಮುಂದೆ ಒಂದು ಗುರಿಯಿರಲಿ, ಹಿಂದೆ ಒಬ್ಬ ಗುರುವಿರಲಿ ಎಂಬಂತೆ ಮಕ್ಕಳಿಗೆ ಗುರಿ ತೋರಿಸುವ ನಾವು ಆ ಮಗುವಿನ ಸಾಧನೆಯ ಹಾದಿಯಲ್ಲಿ ಹಿಂದೆ ಗುರುವಾಗಿ ನಿಂತು ಮಾರ್ಗದರ್ಶನ ನೀಡಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಗೆಲುವು ಸಾಧಿಸುವಂತೆ ಮಾಡೋಣ. ನಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ವೃತ್ತಿಯನ್ನು ಗೌರವಿಸುತ್ತಾ ದುಡಿದು ಆದರ್ಶ ಶಿಕ್ಷಕರಾಗೋಣ. ಹೊಸ ಶಿಕ್ಷಣ ನೀತಿಯೊಂದಿಗೆ ಸಮೃದ್ಧ ಭಾರತ ನಿರ್ಮಿಸಲು ಸೇವೆ ಸಲ್ಲಿಸೋಣ.

ಸಮಸ್ತ ಶಿಕ್ಷಕ ಬಾಂಧವರಿಗೂ ಹಾಗೂ ಒಂದಿಲ್ಲ ಒಂದು ರೀತಿಯ ಜ್ಞಾನಾರ್ಜನೆ ವೃದ್ಧಿಗೆ ಸಹಕರಿಸುವ ಎಲ್ಲರಿಗೂ ಶಿಕ್ಷಕರ ದಿನಾಚರಣೆಯ ಶುಭಾಶಯಗಳು. ●

**ಜೀವನದಲ್ಲಿ ಉನ್ನತ ಆದರ್ಶವನ್ನು ಸ್ವೀಕರಿಸಿ ಅದಕ್ಕಾಗಿ ಇಡೀ ಜೀವನವನ್ನೇ ಬಲಿಕೊಡುವುದು ಪರಮ ಶ್ರೇಷ್ಠ – ಸ್ವಾಮಿ ವಿವೇಕಾನಂದ**

# ಆದರ್ಶ ಶಿಕ್ಷಕರು – ನಾವೂ ಹೀಗಾಗಬಹುದೆ?

■ **ಚಾರುಮತಿ**
**ಬೆಂಗಳೂರು**

ಸತ್ಪ್ರಜೆಗಳನ್ನು ರೂಪಿಸುವಲ್ಲಿ, ಆ ಮೂಲಕ ಆರೋಗ್ಯವಂತ ಸಮಾಜದ ನಿರ್ಮಾಣದಲ್ಲಿ, ಅದರಿಂದ ನಾಡನ್ನು ಕಟ್ಟುವಲ್ಲಿ ಗುರುವಿನ ಪಾತ್ರ ಮಹತ್ತರವಾದುದು. ಅದರಲ್ಲಿಯೂ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ತ್ರಿಮೂರ್ತಿಗಳೆಂಬ ಬ್ರಹ್ಮ, ವಿಷ್ಣು, ಮಹೇಶ್ವರರ ಸ್ಥಾನವನ್ನೇ ನೀಡಿದ್ದೇವೆ. ನಮ್ಮ ದೇಶದ ಇತಿಹಾಸ, ಪುರಾಣಗಳಲ್ಲಿ ಆದರ್ಶ ಗುರುಗಳ ಅಸಂಖ್ಯಾತ ನಿದರ್ಶನಗಳನ್ನೂ ಕಾಣುತ್ತೇವೆ. ಪ್ರತಿಭಾನ್ವಿತ ಗುರುಗಳಿಂದ ಮಾರ್ಗದರ್ಶನ, ಸ್ಫೂರ್ತಿ ಪಡೆದ ಶಿಷ್ಯರು ನಾಡು ಕಟ್ಟುವಲ್ಲಿ, ಧರ್ಮ ಸಂಸ್ಥಾಪನೆಯಲ್ಲಿ, ಸಮಾಜ ಕಲ್ಯಾಣದ ಕಾರ್ಯಗಳಲ್ಲಿ ಯಾವ ರೀತಿ ಯಶಸ್ವಿಯಾದರು ಎಂಬುದಕ್ಕೆ ಉದಾಹರಿಸಬೇಕೆಂದರೆ ದೊಡ್ಡ ಭಂಡಾರವೇ ನಮ್ಮಲ್ಲಿದೆಯೆಂದರೆ ಅತಿಶಯೋಕ್ತಿಯಾಗುವುದಿಲ್ಲ. ಇಂತಹ ಮೌಲ್ಯದ ಆಕರವಾಗಿರುವುದರಿಂದಲೇ ಭಾರತವನ್ನು 'ವಿಶ್ವಗುರು' ಎಂದು ಗೌರವಿಸಲು ಪ್ರಾರಂಭಿಸಿರುವುದು.

ಇಂತಹ ಆದರ್ಶಗುರು ಎಲ್ಲ ಕಾಲಕ್ಕೂ ಸಮಾಜದ ದಾರಿದೀಪದಂತೆ ಮಾರ್ಗದರ್ಶನ ಮಾಡುತ್ತಲೇ ಬಂದಿದ್ದಾರೆ. ಇಂತಹವರ ಬದುಕು, ಜೀವನೋಧ್ಯೇಯ, ಅದನ್ನು ಸಾಧಿಸುವಲ್ಲಿ ಅವರು ನಡೆಸಿದ ಪ್ರಯತ್ನಗಳು, ತಲುಪಿದ ಗುರಿ ಇಂದಿನವರಿಗೆ ಪ್ರೇರಣೆಯಾಗುವುದರಲ್ಲಿ ಸಂಶಯವಿಲ್ಲ. ಅಂತಹವರಲ್ಲಿ ಕೆಲವರನ್ನು ಸ್ಮರಿಸೋಣ.

**ಡಾ॥ ಎಸ್.ರಾಧಾಕೃಷ್ಣನ್:** ಸೆಪ್ಟೆಂಬರ್ 5 ನ್ನು ಪ್ರತಿವರ್ಷ 'ಶಿಕ್ಷಕರ ದಿನಾಚರಣೆ' ಯೆಂದು ಆಚರಿಸುತ್ತೇವೆ. ಅದು ಡಾ॥ ಎಸ್. ರಾಧಾಕೃಷ್ಣನ್‌ರವರ ಜನ್ಮದಿನವೂ ಹೌದು. ನಮ್ಮ ದೇಶದ ರಾಷ್ಟ್ರಾಧ್ಯಕ್ಷರಾಗುವ ಮೊದಲು ಆದರ್ಶ ಶಿಕ್ಷಕರಾಗಿ, ವಿದ್ಯಾರ್ಥಿಗಳ ಪ್ರೀತಿ, ಗೌರವಗಳನ್ನು ಪಡೆದುಕೊಂಡಿದ್ದು, ಗುರುವಿನ ಹೊಣೆಗಾರಿಕೆಯ ಮಹತ್ತ್ವವನ್ನು ಅರಿತು ಸ್ವತಃ ನಿರ್ವಹಿಸಿದ್ದರಿಂದ. ಮುಂದೆ ರಾಷ್ಟ್ರಪತಿಯಾದರೂ ಸಹ ತಮ್ಮ ಜನ್ಮದಿನವೆನ್ನದೆ, 'ಶಿಕ್ಷಕರ ದಿನ' ವೆಂಬ ದೇಶವ್ಯಾಪೀ ಆಚರಣೆಗೆ ನಾಂದಿ ಹಾಕಿದ್ದರು.

ಡಾ॥ ಎಸ್.ರಾಧಾಕೃಷ್ಣನ್‌ರ ಜೀವನ ಆಳ, ವಿಶಾಲ, ವೈವಿಧ್ಯಮಯ. ಮೂರು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದರು. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಭಾರತೀಯ ದರ್ಶನಶಾಸ್ತ್ರ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆಕ್ಸ್‌ಫರ್ಡಿನಲ್ಲಿ ಸ್ಪಾಂಡಿಂಗ್ ಪ್ರಾಧ್ಯಾಪಕರಾಗಿದ್ದರು. ದೆಹಲಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ವಿಶ್ವಸಂಸ್ಥೆಯ ಆರ್ಥಿಕ, ಸಾಮಾಜಿಕ ಸಮಿತಿಯಲ್ಲಿ ಭಾರತ ನಿಯೋಗದ ನಾಯಕರಾಗಿದ್ದರು. ಸೋವಿಯತ್ ರಾಜ್ಯದಲ್ಲಿ ರಾಯಭಾರಿಗಳಾಗಿದ್ದರು. ಭಾರತದ ಉಪಾಧ್ಯಕ್ಷರಾಗಿದ್ದು, ನಂತರ ರಾಷ್ಟ್ರಪತಿಗಳಾದರು. ಆದರೆ, ಇದೆಲ್ಲವನ್ನೂ ಮೀರಿದ್ದು ಗುರುವಾಗಿ ಅವರ ವ್ಯಕ್ತಿತ್ವ ಪಡೆದುಕೊಂಡಿದ್ದ ಅಸಂಖ್ಯಾತ ಶಿಷ್ಯರ ಪ್ರೀತಿ, ಗೌರವ. ಮೈಸೂರು ವಿಶ್ವವಿದ್ಯಾಲಯದಿಂದ ಅವರು ಹೊರಟಾಗ ರೈಲು ನಿಲ್ದಾಣಕ್ಕೆ ಹೊರಡಲು ಸಜ್ಜಾಗಿ ನಿಂತಿದ್ದ ಸಾರೋಟನ್ನು ಅವರ ಶಿಷ್ಯರು, ಕಟ್ಟಿದ್ದ ಕುದುರೆಗಳನ್ನು ಕಳಚಿ ತಾವೇ ಎಳೆದುಕೊಂಡು ಹೋಗಿ ಗುರುಗಳನ್ನು ಬೀಳ್ಕೊಂಡ ಘಟನೆ ಇಂದಿಗೂ ನಭೂತೋನಭವಿಷ್ಯತಿ ಎಂದು ಪ್ರಸಿದ್ಧವಾಗಿದೆ.

ಕನ್ನಡ ಸಾಹಿತ್ಯದ 'ಅಶ್ವಿನೀದೇವತೆ'ಗಳು ಎಂದೇ ಪ್ರಸಿದ್ಧರಾದವರು **ಪ್ರೊ. ಟಿ.ಎಸ್.ವೆಂಕಣ್ಣಯ್ಯನವರು ಮತ್ತು ಡಾ॥ ಎ.ಆರ್.ಕೃಷ್ಣಶಾಸ್ತ್ರಿಗಳು.** ಇವರಿಬ್ಬರು ಕನ್ನಡ ನಾಡುನುಡಿಗೆ ಮಾಡಿದ ಸೇವೆ, ಮಾರ್ಗದರ್ಶನ ನೀಡಿದ ಅಪಾರ ಸಂಖ್ಯೆಯ ಶಿಷ್ಯವೃಂದದ ವಿವರಗಳನ್ನು ಪುಟಗಟ್ಟಲೇ ಬರೆದರೂ ಮುಗಿಯುವಂತಹುದಲ್ಲ. ಇವರ ಶಿಷ್ಯರಾಗುವ ಸೌಭಾಗ್ಯವನ್ನು ಪಡೆದ ಅದೆಷ್ಟೋ ಜನ ಮುಂದೆ ಸಾಹಿತ್ಯ ಕ್ಷೇತ್ರದ ಮೇರು ವ್ಯಕ್ತಿಗಳಾಗಿ ಕನ್ನಡದ ಸೇವೆಯಲ್ಲಿ ಕೃತಾರ್ಥರಾದ ಉದಾಹರಣೆಗಳಿವೆ. ಡಾ॥ ಎ.ಆರ್.ಕೃಷ್ಣಶಾಸ್ತ್ರಿಗಳ ಶಿಷ್ಯವಾತ್ಸಲ್ಯವಂತೂ ಅವರ ಶಿಷ್ಯರೆಲ್ಲರ ಬದುಕಿನಲ್ಲಿ ಸಂಜೀವಿನಿಯಂತೆ ಚೈತನ್ಯದಾಯಕವಾಗಿದ್ದುದು. ಅವರ ವಿದ್ವತ್ತು, ಬೋಧನಾ ವಿಧಾನ, ಬೋಧನಾ ಸಾಮರ್ಥ್ಯ ಒಂದು ತೂಕವಾಗಿದ್ದರೆ ಅವರು ತಮ್ಮ ಶಿಷ್ಯರ ಬಗೆಗೆ ವಹಿಸುತ್ತಿದ್ದ ಕಾಳಜಿ, ವಾತ್ಸಲ್ಯ ಮತ್ತೊಂದು ತೂಕವಿರುತ್ತಿತ್ತು. ಶಿಷ್ಯರೊಂದಿಗೆ ಹಿರಿಯ ಮಿತ್ರರಂತೆ ಪ್ರೀತಿ, ವಿಶ್ವಾಸಗಳಿಂದ ತಮ್ಮ ಕೊಠಡಿಗೆ ಅವರು ಬಂದಾಗ ಮಾತನಾಡಿಸುತ್ತಿದ್ದರು. ಗುರುವೆಂಬ ಪದವಿಗೆ ತಕ್ಕಂತೆ ಜ್ಞಾನದ ಭಂಡಾರವೇ ಆಗಿದ್ದ ಕೃಷ್ಣಶಾಸ್ತ್ರಿಗಳಿಗೆ ಕನ್ನಡ, ಸಂಸ್ಕೃತ, ಬಂಗಾಳಿ ಮುಂತಾದ ಹಲವು ಭಾಷೆಗಳಲ್ಲಿದ್ದ ವಿದ್ವತ್ತು, ಅವರ ಸಾರ್ಥಕ ಜೀವನ, ವಿದ್ಯಾರ್ಥಿಪರ ಕಾಳಜಿ, ತಾಯ್ನುಡಿಯ ಪುರೋಭಿವೃದ್ಧಿಗಾಗಿ ತಳೆದಿದ್ದ ತ್ರಿಕರಣ ಶುದ್ಧವಾದ ದೀಕ್ಷೆ ಎಲ್ಲವೂ ಯಾವಕಾಲಕ್ಕೂ ತಲೆಬಾಗಿ ವಂದಿಸುವಂತಿವೆ. ಬರೆಯಬೇಕೆನ್ನುವವರಿಗೆ ಅವರ ನುಡಿಗಳು ಸ್ಫೂರ್ತಿದಾಯಕವಾದ ನಿಧಿಗಳಂತಿವೆ. "ಗಮನವಿಟ್ಟು ಓದಬೇಕು, ಕಣ್ಣಿಟ್ಟು ನೋಡಬೇಕು, ಲಕ್ಷ್ಯವಿಟ್ಟು ಬರೆಯಬೇಕು". ಇವು ಅವರು ಲೇಖಕರಿಗೆ ಕರುಣಿಸಿರುವ ಅಮೂಲ್ಯವಾದ ಮೂರು ಸೂತ್ರ ಸಂದೇಶಗಳು.

ಇಂತಹ ಪೂಜ್ಯ ಗುರುಪರಂಪರೆಯ ಸಾಲಿನಲ್ಲಿ ನಿಲ್ಲುವ ಶತಾಯುಷಿ **ಪ್ರೊ. ಜಿ. ವೆಂಕಟಸುಬ್ಬಯ್ಯ** ಅವರು ನಮ್ಮೊಂದಿಗಿರುವುದೇ ನಮ್ಮ ಸೌಭಾಗ್ಯ ಹಾಗೂ ಅತ್ಯಂತ ಸಂತಸದ ಸಂಗತಿಯಾಗಿದೆ. ವಿದ್ವಾಂಸರ ವಲಯದಲ್ಲಿ ಇವರು ಪ್ರೊ.ಜಿ.ವಿ. ಅಸಂಖ್ಯಾತ ಶಿಷ್ಯವೃಂದಕ್ಕೆ ಪ್ರೀತಿಯ 'ಮೇಷ್ಟ್ರು'. ಕನ್ನಡ ಸಾರಸ್ವತ ಲೋಕದ ಅತ್ಯಂತ ಹಿರಿಯ ಸಾಹಿತ್ಯಜೀವಿ. ಇದೇ ಆಗಸ್ಟ್ ತಿಂಗಳ 23ಕ್ಕೆ 106 ವರ್ಷಗಳನ್ನು ಪೂರೈಸಿ 107ಕ್ಕೆ ಕಾಲಿಟ್ಟ ಈ 'ಮೇಷ್ಟ್ರು' ತಮ್ಮ ಸುದೀರ್ಘ ಬದುಕಿನಲ್ಲಿ ಪಾಠ ಹೇಳಿಕೊಟ್ಟ ವಿದ್ಯಾರ್ಥಿಗಳು ಮೂರು ತಲೆಮಾರಿಗೂ ಸಲ್ಲುತ್ತಾರೆ. ಕುವೆಂಪು, ಎಂ.ಎ.ವೆಂಕಟರಾವ್, ಎನ್.ಕಸ್ತೂರಿ ಮುಂತಾದ ಘಟಾನುಘಟಿಗಳನ್ನು ಗುರುವೃಂದದಲ್ಲಿ ಪಡೆದುಕೊಂಡು ಎಲ್ಲರ ಪ್ರೀತಿಪಾತ್ರ ಶಿಷ್ಯರಾಗಿ, ಸದಾ ಅಧ್ಯಯನಶೀಲರಾಗಿದ್ದ ಜಿ.ವಿ.ಯವರು ಒಳಾಂಗಣ ಆಟಗಳಲ್ಲಿಯೂ ಪರಿಣಿತರಾಗಿದ್ದು, ಮೈಸೂರು ವಿಶ್ವವಿದ್ಯಾಲಯದಲ್ಲಿ ಬಹುಮಾನಗಳನ್ನು ಕೈತುಂಬ ಪಡೆದುಕೊಳ್ಳುತ್ತಿದ್ದರು.

ಕನ್ನಡ ಎಂ.ಎ., ಬಿ.ಟಿ. ಪದವಿಗಳನ್ನು ಪಡೆದು ಪ್ರಾರಂಭದಲ್ಲಿ ಆಂಗ್ಲಭಾಷೆಯ ಬೋಧನೆ ಮಾಡುವ ಪರಿಸ್ಥಿತಿ ಜಿ.ವಿ.ಯವರಿಗೆ ಒದಗಿತ್ತು. ಆದರೇನು? ಎರಡೂ ಭಾಷೆಗಳಲ್ಲಿ ಅವರು ಪರಿಣಿತರೇ ಆಗಿದ್ದು, ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು. ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಸತತವಾಗಿ 1943ರಿಂದ 1972ರ ವರೆಗೆ ಕನ್ನಡ ಪ್ರಾಧ್ಯಾಪಕರಾಗಿ, 1972 ರಿಂದ 1973ರ ವರೆಗೂ ವಿಜಯಾ ಸಂಜೆ

**ಪುಟ 5 ಕ್ಕೆ** ➤

➢ ಪುಟ 4 ರಿಂದ.....

ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿ 1973ರಲ್ಲಿ ನಿವೃತ್ತರಾದ ಜಿ.ವಿ.ಯವರಿಗೆ "ಮೂರು ಪೀಳಿಗೆಗಳ ವಿದ್ಯಾರ್ಥಿಗಳಿಗೆ ನಾನು ಪಾಠ ಮಾಡಿದ್ದೇನೆ" ಎಂಬ ತೃಪ್ತಿ, ಸಮಾಧಾನ, ಹೆಮ್ಮೆಯಿದೆ. ನಿವೃತ್ತರಾದರೂ ಇವರು ತಮ್ಮ ಜ್ಞಾನಪ್ರಸಾರ ಮಾಡುವಲ್ಲಿ ಸದಾ ಸಿದ್ಧ. ಯಾರು ಬೇಕಾದರೂ ಕನ್ನಡ ಭಾಷೆಗೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಏನೇ ಸಮಸ್ಯೆ ಬಂದರೂ ಇವರನ್ನು ಕೇಳಿ ಪರಿಹರಿಸಿಕೊಳ್ಳಬಹುದು. ಅತ್ಯಂತ ಸ್ನೇಹಪೂರ್ಣವಾದ ನಡವಳಿಕೆಯೊಂದಿಗೆ ವಿದ್ಯಾರ್ಥಿಗಳ ಮನವನ್ನು ಗೆದ್ದ ವಾತ್ಸಲ್ಯಮಯಿ ಜಿ.ವಿಯವರು. ಕೇವಲ ಬೋಧನೆಗೆ ಮಾತ್ರ ತಮ್ಮ ಸೇವೆಯನ್ನು ಸೀಮಿತಗೊಳಿಸದೆ ಕನ್ನಡ ಸಾಹಿತ್ಯದ ಹಲವು ಕ್ಷೇತ್ರಗಳಲ್ಲಿ ಕೃಷಿ ಮಾಡಿದವರು. ಪ್ರಮುಖವಾಗಿ ನಿಘಂಟು ರಚನೆಗಳಲ್ಲಿ ಇವರ ಪರಿಶ್ರಮ ಅಪಾರ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡಕೋಶ ಸಮಿತಿಯ ಅಧ್ಯಕ್ಷರಾಗಿ ಏಳು ಸಂಪುಟಗಳ ರಚನೆಯ ನೇತೃತ್ವ, ಪ್ರಿಸಮ್ ಇಂಗ್ಲಿಷ್–ಕನ್ನಡ ನಿಘಂಟು, ಐ.ಬಿ.ಹೆಚ್. ಕನ್ನಡ –ಕನ್ನಡ–ಇಂಗ್ಲಿಷ್ ನಿಘಂಟು, ಎರವಲು ಪದಕೋಶ, ಕನ್ನಡ ಕ್ಲಿಷ್ಟ ಪದಕೋಶ ಮುಂತಾಗಿ ಹಲವಾರು ನಿಘಂಟುಗಳ ರಚನೆಯಲ್ಲಿ ಇವರದೇ ನೇತೃತ್ವ. ಶಬ್ದಬ್ರಹ್ಮ, ಶಬ್ದವಿಹಾರಿ, ಶಬ್ದಸಾಗರ, ನಿಘಂಟುಬ್ರಹ್ಮ, ಕನ್ನಡದ ಪಾಣಿನಿ ಮುಂತಾಗಿ ಇವರನ್ನು ಗೌರವಿಸಿದ ಬಿರುದುಗಳು ಹಲವಾರಿದ್ದರೂ ಇವರು ತಮ್ಮ ವಿದ್ಯಾರ್ಥಿಗಳಿಗೆ 'ಪ್ರೀತಿಯ ಮೇಷ್ಟ್ರು'. 'ನಡೆದಾಡುವ ನಿಘಂಟು' ಎಂಬ ಹಿರಿಮೆಯನ್ನು ಹೊಂದಿರುವ ಪ್ರೊ.ಜಿ.ವಿ.ಯವರು ನಾಡು ಕಂಡ ಶ್ರೇಷ್ಠ ಗುರುಗಳಲ್ಲಿ ಒಬ್ಬರು.

'ದೊಡ್ಡ ಮನಸ್ಸಿನವರಿಗೆ ವಿಶ್ವವೇ ಪರಿವಾರ' ಎಂಬ ಮಾತಿದೆ. ಇಂತಹ ಒಬ್ಬ ಘನ ವ್ಯಕ್ತಿತ್ವ ಹೊಂದಿದವರು **ಚಕ್ರವರ್ತಿ ಶ್ರೀಧರ್** ಎಂಬ ಶಿಕ್ಷಕರು. ಮೈಸೂರು ಜಿಲ್ಲೆಯ ಸೋಸಲೆ ಗ್ರಾಮದವರು. 36 ವರ್ಷಗಳು ಶಿಕ್ಷಕ ವೃತ್ತಿ. ವಿವಿಧ ಊರುಗಳಲ್ಲಿ ಸುತ್ತಾಟ, ವೃತ್ತಿಯನ್ನು ಮಾಡಿದ್ದು ಹೊಟ್ಟೆಪಾಡಿಗಲ್ಲ. ವಿದ್ಯಾರ್ಥಿಗಳ ಏಳಿಗೆಗಾಗಿಯೇ ಬದುಕನ್ನು ಮೀಸಲಿಡುವ ಸಂಕಲ್ಪದೊಂದಿಗೆ ಅವಿವಾಹಿತರಾಗಿಯೇ ಉಳಿದು ಬರುವ ವೇತನದಲ್ಲಿ ಸ್ವಂತ ವೆಚ್ಚಕ್ಕೆ ಕನಿಷ್ಠ, ವಿದ್ಯಾರ್ಥಿಗಳಿಗೇ ಗರಿಷ್ಠ ಪ್ರಮಾಣವನ್ನು ವ್ಯಯಿಸಿದ ತ್ಯಾಗಮಯಿ. ನಿವೃತ್ತಿಯಾದಾಗ ಬರುತ್ತಿದ್ದ 18000ರೂಗಳಲ್ಲಿ ಕೇವಲ 1500ರೂ ಮಾತ್ರ ತಮಗಾಗಿ ಇಟ್ಟುಕೊಂಡು ಉಳಿದ 16500ರೂಗಳು ಬಡವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಫೀ, ಬಟ್ಟೆಬರೆ, ಹಾಸ್ಟೆಲ್ ವೆಚ್ಚಕ್ಕೆ ನೀಡುತ್ತಿದ್ದರು. ನಿವೃತ್ತಿಯ ಸಮಯದಲ್ಲಿ ಬಂದ ಹಣವನ್ನು ಕೂಡ 44 ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಹಂಚಿ ಧನ್ಯತೆಯ ಪುಳಕ ಅನುಭವಿಸಿದವರು. "ನನ್ನ ಉಸಿರಿರುವವರೆಗೂ ವಿದ್ಯಾದಾನ ಮಾಡುವೆ. ವಿದ್ಯಾರ್ಥಿಗಳ ಸಾಧನೆಯೇ ನನಗೆ ಸಂತೃಪ್ತಿ, ಹೆಮ್ಮೆ ತರುತ್ತದೆ" ಎಂಬುದೇ ಇವರ ಮಾತುಗಳು.

ಚಕ್ರವರ್ತಿ ರಾಜಗೋಪಾಲಾಚಾರಿಯವರ ಬಂಧುಗಳಾದ ಶ್ರೀಧರ ಅವರ ಶಿಷ್ಯವೃಂದ ಅಪಾರ. ಸರಳ ಬದುಕು–ಉನ್ನತ ವಿಚಾರ ಎಂಬ ತತ್ತ್ವವನ್ನು ಮೈಗೂಡಿಸಿಕೊಂಡ ಇವರಿಗೆ ಇತ್ತೀಚೆಗೆ ಹುಬ್ಬಳ್ಳಿಯ ಗೃಹರಕ್ಷಕದಳವು 'ಸೆಲ್ಯೂಟ್' ಕೊಟ್ಟು ಗೌರವಿಸಿತು. ಕಾರಣ ಗೃಹರಕ್ಷಕ ದಳದಲ್ಲಿರುವ ಅರ್ಧಕ್ಕಿಂತ ಹೆಚ್ಚಿನವರು ಇವರಿಂದ ಉಪಕೃತರಾದವರೇ. 'ಗಳಿಕೆ ಮುಖ್ಯ' ಎಂಬ ಮನೋಭಾವದವರೇ ಎಲ್ಲಕಡೆ ಇರುವುದಿಲ್ಲ. ಶ್ರೀಧರರಂತಹ ಅಪರೂಪದ ಶಿಕ್ಷಕರೂ ಇದ್ದಾರೆಂದರೆ ಇಂತಹ ಗುರುಗಳಿಗೆ ಶಿಷ್ಯರು ಸಾಷ್ಟಾಂಗ ನಮಸ್ಕಾರ ಮಾಡಬೇಕು.

ದೇಶಕಂಡ ಮತ್ತೊಬ್ಬ ಅದ್ಭುತ ಶಿಕ್ಷಕರು ಡಾ.ಎ.ಪಿ.ಜೆ. ಅಬ್ದುಲ್‌ಕಲಾಂ. ಮೂಲತಃ ವಿಜ್ಞಾನಿಯಾಗಿ ತಮ್ಮ ಹಲವು ಸಾಧನೆಗಳಿಂದ ದೇಶ, ವಿದೇಶಗಳು ಕೊಡಮಾಡುವ ಪ್ರತಿಷ್ಠಿತ ಪುರಸ್ಕಾರಗಳ ಗೌರವಕ್ಕೆ ಭಾಜನರಾದರೂ ಅವರ ವಿಶೇಷ ಗಮನವಿದ್ದುದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವತ್ತ. ರಾಷ್ಟ್ರಪತಿಗಳಾಗಿ (ಹನ್ನೊಂದನೆಯವರು) ದೇಶದ ಉನ್ನತ ಹುದ್ದೆಯ ಜವಾಬ್ದಾರಿಯನ್ನು ನಿರ್ವಹಿಸಿದರೂ ದೇಶದ ಯಾವ ಮೂಲೆಗೆ ಹೋದರೂ ಅಲ್ಲಿನ ಶಾಲೆಗಾಗಲೀ, ಕಾಲೇಜಿಗಾಗಲೀ ಭೇಟಿ ನೀಡದೆ ಬಂದದ್ದೇ ಇಲ್ಲ. ಅಲ್ಲಿನ ವಿದ್ಯಾರ್ಥಿಗಳಿಗೆ ವಿಜ್ಞಾನದ ಕುರಿತು ಆಸಕ್ತಿ ಮೂಡಿಸುವ ಮಾರ್ಗದರ್ಶಕ ನುಡಿಗಳನ್ನಾಡದೇ ಬಂದದ್ದೇ ಇಲ್ಲ. ಯುವಜನರಿಗೆ ಅತ್ಯಂತ ಮಹತ್ತ್ವವಾದ ಉನ್ನತ ಧ್ಯೇಯಗಳನ್ನು ಒಳಗೊಂಡ ಕನಸುಗಳನ್ನು ಕಾಣುವಂತೆ ಒತ್ತಾಯಿಸುತ್ತ, ಆ ಕನಸುಗಳಲ್ಲೇ ಅವರ ಭವಿಷ್ಯವನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತಿದ್ದರು. ದೃಢಸಂಕಲ್ಪ, ಜೀವನದ ಶಿಸ್ತು ಈ ಕಾರ್ಯದಲ್ಲಿ ನೆರವಾಗುವುದೆಂಬ ಉಪದೇಶವನ್ನೂ ಹೇಳುತ್ತಿದ್ದರು. ಮಾಜಿ ರಾಷ್ಟ್ರಪತಿಗಳಾಗಿ ವಿದ್ಯಾರ್ಥಿಗಳನ್ನು ಅವರು ಮಾತನಾಡಿಸುತ್ತಿರಲಿಲ್ಲ. ಪ್ರೀತಿಯ 'ಕಲಾಂಮೇಷ್ಟ್ರು' ಎಂದೇ ಆರಾಧಿಸುವಂತೆ ಅವರೊಡನೆ ಒಡನಾಟವಿರುತ್ತಿತ್ತು.

ದೇಶದ ಮೂಲೆ ಮೂಲೆಗಳಲ್ಲಿ ಹುಡುಕಿದರೆ ಎಲ್ಲ ಕಾಲಘಟ್ಟದಲ್ಲಿಯೂ ಇಂತಹ ಆದರ್ಶ ಗುರುಗಳನ್ನು ಕಾಣುತ್ತೇವೆ. ಕೆಲವರು ಮುಖ್ಯವಾಹಿನಿಯಲ್ಲಿ ಕಂಡುಬಂದರೆ ಮತ್ತೆ ಅದೆಷ್ಟೋ ಜನ ಎಲೆ ಮರೆಯ ಕಾಯಿಯಂತೆ ಸಾರ್ಥಕ ಜೀವನ ನಡೆಸಿರುತ್ತಾರೆ.

ಸುಮಾರು 84 ವರ್ಷಗಳ ಹಿಂದೆ ಹುಟ್ಟಿ ಇಂತಹ ಆದರ್ಶ ವ್ಯಕ್ತಿಯಾಗಿ ರೂಪುಗೊಂಡು ಸಮಾಜದ ಬೆಳಕಾಗಿ ನೂರಾರು ಮಕ್ಕಳ ಬಾಳನ್ನು ರೂಪಿಸಿದ ಸಾರ್ಥಕ ಶಿಕ್ಷಕರೊಬ್ಬರು ಕಟಿಲ್ ಸಮೀಪದಲ್ಲಿನ ಮುಲ್ಕಿಯಲ್ಲಿ ವಿಶ್ರಾಂತ ಹಾಗೂ ಪ್ರಶಾಂತ ಜೀವನವನ್ನು ನಡೆಸುತ್ತಿದ್ದಾರೆ. ಅವರೇ 'ಲಕ್ಷ್ಮಣ ಬೆಳ್ಚಡ' ಎಂಬ ಶಿಕ್ಷಕರು. 25ರ ವಯಸ್ಸಿನಲ್ಲಿ ಟಿ.ಸಿ.ಹೆಚ್. ಮಾಡಿ ಶಿಕ್ಷಕರಾಗಿ ನೇಮಕಾತಿಯ ಆದೇಶವನ್ನು ಕೈಯಲ್ಲಿ ಹಿಡಿದು ಸರ್ಕಾರ ಸೂಚಿಸಿದಂತೆ 'ಮಿಯ್ಯಾರು' ಎಂಬ (ಉಡುಪಿ ಸಮೀಪ) ಕುಗ್ರಾಮಕ್ಕೆ ಹೊರಟವರು.

ದಂಡಕಾರಣ್ಯಕ್ಕೆ ಹೊರಟಂತೆಯೇ ಇತ್ತು ಅವರ ಪರಿಸ್ಥಿತಿ. ಅಲ್ಲಲ್ಲಿ ಕೇಳುತ್ತ ಕುಗ್ರಾಮ ತಲುಪಿದವರ ಕೈಯಲ್ಲಿ ನೇಮಕಾತಿ ಆದೇಶ, ಒಂದಷ್ಟು ಬಟ್ಟೆಗಳಿದ್ದ ಕೈಚೀಲ ಬಿಟ್ಟರೆ ಮತ್ತೇನೂ ಇರಲಿಲ್ಲ. ಊರಿನಲ್ಲಿ ಶಾಲೆಯೆಂಬ ಹೆಸರೇ ಇರಲಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಮನೆ ಹುಡುಕಿ ಅವರಲ್ಲಿಯೇ ಬಿಡಾರ ಮಾಡಿ, ಅವರ ಸೂಚನೆಯಂತೆ ಅಜ್ಜಿಯೊಬ್ಬರ ಮನೆಯೆಂಬ ಗುಡಿಸಲಿನ ಮುಂದಿದ್ದ ಜಗುಲಿಯೇ ಶಾಲೆಯಾಗಿತ್ತು. ಊರಿನ ತುಂಬ ಇದ್ದವರು 'ಮಲೆ ಕುಡಿಯರು' ಎಂಬ ಜನ. ಮನೆ ಮನೆಗೆ ಹೋಗಿ ಶಿಕ್ಷಣದ ಅರಿವು ನೀಡಿ ಕೈಹಿಡಿದು ಕರೆತಂದದ್ದು ಕೇವಲ ನಾಲ್ಕು ಮಕ್ಕಳು. ಮುಖ ತೊಳೆದು, ತಲೆ ಬಾಚಿ ಕರೆತಂದು ಜಗುಲಿಯಲ್ಲಿ ಕುಳ್ಳಿರಿಸಿ ಅಕ್ಷರಾಭ್ಯಾಸ ಮಾಡಿಸಲು ತೊಡಗಿದ್ದರು. ಅವರೆಲ್ಲ ಕುಡುಬಿ ಜನಾಂಗವೆಂದೂ ಕರೆಸಿಕೊಳ್ಳುತ್ತಿದ್ದ ಜನ. ಅಕ್ಷರ ಕಲಿತರೆ ಸರ್ವನಾಶ ಎಂದು ಭಾವಿಸಿದ್ದ ಜನ ಅವರು. ಮೊದಲಿಗೆ ಲಕ್ಷ್ಮಣ ಬೆಳ್ಚಡರನ್ನು ಮನೆ ಬಾಗಿಲಿನಿಂದ ಓಡಿಸಿದ್ದೂ ಉಂಟು. ಹೀಗೆ ಆರು ವರ್ಷಗಳು ತಮ್ಮ ವೇತನದ ಹಣದಿಂದ ಪೆಪ್ಪರ್‌ಮೆಂಟು, ಬಿಸ್ಕೆಟ್ ತಂದು ಮಕ್ಕಳ ಮನವೊಲಿಸಿ, ಅವರ ಶೀತ,

ಪುಟ 9 ಕ್ಕೆ ➢

# ಮೊದಲು ನೆನೆದೇವು ಅಕ್ಷರದವ್ವನಾ...



**ಶ್ರೀಮತಿ ಸುಮಂಗಳ ಎಸ್. ಹಾರೊಕೊಪ್ಪ**
ಸಹಶಿಕ್ಷಕಿ, ಬಾಲಕರ ಪದವಿ ಪೂರ್ವ ಕಾಲೇಜು, ರಾಮನಗರ

ಇತ್ತೀಚೆಗಷ್ಟೇ ಸಂವಿಧಾನದ ಆಶಯಗಳಿಗೆ ಬದ್ಧವಾಗಿ ಸರ್ಕಾರಗಳು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಂದಷ್ಟು ಉತ್ತೇಜನ ನೀಡುತ್ತಿವೆ. ಸಾಲದೆಂಬಂತೆ ಮೀಸಲಾತಿಯನ್ನು ಕರುಣಿಸಿವೆ. ಆದರೆ 150 ವರ್ಷಗಳ ಹಿಂದೆ ಶೈಕ್ಷಣಿಕ, ಸಾಮಾಜಿಕ ಅಗತ್ಯಗಳ ಕಂಡ ಒಂದು ಹೆಣ್ಣು ತನ್ನ ಜೀವನದ ಉದ್ದಕ್ಕೂ ನಿಸ್ವಾರ್ಥತೆಯಿಂದ ಬೇರೇನನ್ನೂ ಯೋಚಿಸದೆ ಕಂಕಣಬದ್ಧವಾಗಿ ನಿಂತು ಸ್ತ್ರೀ ವಿಮೋಚನೆಗಾಗಿ ಶಪಥಗೈದಂತೆ ಕಾರ್ಯನಿರ್ವಹಿಸಿದ್ದು ಈ ಕ್ಷಣಕ್ಕೂ ಆದರ್ಶಪ್ರಾಯ, ಅಪ್ಯಾಯಮಾನವಲ್ಲದೆ ಮತ್ತೇನು? ತಮ್ಮನ್ನು ಪಿತೂರಿಯಿಂದ ಶಾಲೆ ಬಿಡುವಂತೆ ಮಾಡಿದವರ ಎದುರೇ ಪತಿ ಜ್ಯೋತಿಬಾಪುಲೆಯವರೂ ಕೂಡ ತಾನು ಕಲಿತು ತನ್ನ ಪತ್ನಿಯನ್ನು ವಿದ್ಯಾಭ್ಯಾಸದಲ್ಲಿ ತೊಡಗಿಸಿ ಅಂದಿನ ಕಾಲಕ್ಕೆ ಮಾದರಿಯಾದವರು. ಮಾತೆ ಸಾವಿತ್ರಿಬಾಪುಲೆ ಹಾಗೂ ಜ್ಯೋತಿಬಾಪುಲೆ ದಂಪತಿಗಳಿಬ್ಬರೂ 1848–1952ರ ಅವಧಿಯಲ್ಲಿ ಸುಮಾರು 14 ರಿಂದ 18 ಶಾಲೆಗಳನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತೆರೆದ ಇತಿಹಾಸವನ್ನು ಮೊದಲಿಗೆ ಯಾರೂ ಸರಿಗಟ್ಟಲಾರರು ಎಂಬುದು ಸರ್ವವಿದಿತ. ಪ್ರತಿ ಮಗುವು ಬಾಲ್ಯದಲ್ಲಿ ತಂದೆ ತಾಯಿಯಿಂದ ಶಿಕ್ಷಣ ಪಡೆದರೆ ಮಾತೆ ಸಾವಿತ್ರಿಬಾಪುಲೆಯವರಿಗೆ ಕೈ ಹಿಡಿದ ಪತಿರಾಯರೇ ಗುರು ಹಾಗೂ ಸ್ಫೂರ್ತಿಯಾದರು.

ಮಾನವೀಯತೆಯ ಸಾಕಾರಮೂರ್ತಿ, ಶಿಕ್ಷಕಿ, ಸಂಚಾಲಕಿ, ಸಾಹಿತಿ, ಕವಿಯತ್ರಿ, ಸಮಾಜ ಸುಧಾರಕಿ, ಹೋರಾಟಗಾರ್ತಿ, ಸಮಾಜದ ಚಿಕಿತ್ಸಕಿ, ಮಾತೃಹೃದಯಿ ಸಾವಿತ್ರಿಬಾಯಿಯವರ ದಾರಿ ಹೂಹಾಸಿಗೆಯಲ್ಲ, ಕಠಿಣ ಪರಿಸ್ಥಿತಿಯಲ್ಲಿ ತಮ್ಮ ಗುರಿ ಸಾಧನೆಯ ಕಡೆ ದಿಟ್ಟಹೆಜ್ಜೆಯಿಟ್ಟವರು. ಮಹಿಳೆಯೊಬ್ಬಳು ಶಿಕ್ಷಕಿಯಾಗುವುದು ಧರ್ಮಕ್ಕೂ, ಸಮಾಜಕ್ಕೂ ದ್ರೋಹ ಮಾಡಿದಂತೆ ಎಂಬ ಮನಸ್ಥಿತಿಯಿದ್ದ ಕಾಲದಲ್ಲಿ, ಬೆಂಕಿಯಲ್ಲಿ ಅರಳಿದ ಹೂವಿನಂತೆ ಎಲ್ಲ ವಿರೋಧಭಾಸಗಳ ನಡುವೆ ಅಂದುಕೊಂಡಿದ್ದನ್ನು ಸಾಧಿಸಿದ ಗಟ್ಟಿಗಿತ್ತಿ ಕೂಡ. ಮಹಾರಾಷ್ಟ್ರದ ಸತಾರ ಜಿಲ್ಲೆಯ ನೈಗಾಂವ್‌ನಲ್ಲಿ 1931ರ ಜನವರಿ 03ರಂದು ನವಸೆಪಾಟೀಲ್ ಹಾಗೂ ಲಕ್ಷ್ಮಿಬಾಯಿ ದಂಪತಿಗಳಿಗೆ ಜನಿಸಿದ, ಸಮಾಜದ ಸ್ತ್ರೀಶಿಕ್ಷಣದ ಮಹಾಬೆಳಕು ತನ್ನ ಮುಗ್ಧತೆಯೊಂದಿಗೆ ಬಾಲ್ಯವಿವಾಹಕ್ಕೆ 9ರ ಪ್ರಾಯದಲ್ಲೇ ಸಿಲುಕಿದರೂ ವಿದ್ಯೆ ಕಲಿಕೆಗೆ ಮುಡಿಪಾಗಿಟ್ಟು 16ನೇ ವಯಸ್ಸಿನಲ್ಲಿ, ಶಿಕ್ಷಕಿ ತರಬೇತಿ ಪಡೆದು ಕನ್ಯಾಶಾಲೆಯ ಆರಂಭಿಸಿ ಪ್ರಧಾನ ಶಿಕ್ಷಕಿಯಾದ ಈ ಮಹಾಶಕ್ತಿ ಬಗ್ಗೆ ಅನೇಕರಿಗೆ ತಿಳಿದಿಲ್ಲ. ಜೀವನಪೂರ ಪತಿಗೆ ಬೆಂಗಾವಲಾಗಿ ನಿಂತು ವಿಧವೆಯೊಬ್ಬರ ಮಗ ಯಶವಂತನನ್ನು ದತ್ತು ಸ್ವೀಕರಿಸಿ ಮಕ್ಕಳಿರದ ನೋವು ಮರೆತು ಮಹಾಮಾತೆಯಾದವರು.

## ಸಾಮಾಜಿಕ ಕ್ಷೇತ್ರ ಹಾಗೂ ಶಿಕ್ಷಣ ಕ್ಷೇತ್ರದ ಅಮೋಘ ಸೇವೆ

ಮಾತೆ ಸಾವಿತ್ರಿಬಾಯಿಪುಲೆಯವರ ಕಾರ್ಯಶೀಲತೆ ಹಾಗೂ ಛಲವಂತಿಕೆ 18ನೇ ಶತಮಾನದ ಉತ್ತರ ಕಾಲದಲ್ಲಿ ಭಾರತೀಯರೇ ಅಲ್ಲದೆ ಬ್ರಿಟೀಷರನ್ನೂ ಬೆಚ್ಚಿಸಿತು. ತ್ವರಿತಗತಿಯಲ್ಲಿ 14 ಶಾಲೆಗಳನ್ನು ಆರಂಭಿಸಿ ಶೈಕ್ಷಣಿಕವಾಗಿ ಅತ್ಯುತ್ತಮ ಆಡಳಿತ ನಿರ್ವಹಿಸಿದುದು ಬ್ರಿಟೀಷ ಸರ್ಕಾರದ ಮೆಚ್ಚುಗೆಗೆ ಪಾತ್ರವಾಗಿ : "ಭಾರತದ ಮೊಟ್ಟಮೊದಲ ಶಿಕ್ಷಕಿ" ಎಂಬ ಬಿರುದು ನೀಡುವಂತಾಯಿತು. ಇಂತಹ ಅಸಮಾನ್ಯ ಮಹಿಳಾ ಶಕ್ತಿಯ ಬಗ್ಗೆ ಐದಾರು ವರ್ಷಗಳಿಂದೀಚೆಗೆ ಅರಿವು ಮೂಡಿದುದು ತುಸು ಸಮಾಧಾನಕರವೂ ಹೌದು. ಏಕೆಂದರೆ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಿದಂತಹ ವಿದ್ವಾಂಸರ ಹೆಸರಲ್ಲಿ ಶಿಕ್ಷಕರ ದಿನಾಚರಣೆ ಬಹುಸೂಕ್ತ ಹಾಗೂ ನ್ಯಾಯಸಮ್ಮತ. ಶಾಲೆಯನ್ನು ತೊರೆಯದ ವಿದ್ಯಾರ್ಥಿಗಳಿಗೆ ಸ್ಟೈಫೆಂಡ್ ಕೊಡುವ ಯೋಜನೆ ಆರಂಭಿಸಿದ್ದು ಅವರ ದೂರಗಾಮಿ ಚಿಂತನೆಗೆ ಹಿಡಿದ ಕನ್ನಡಿಯಾಗಿದೆ. 1873ರಲ್ಲಿ ಅನಾಥಶಿಶುಗಳಿಗಾಗಿ ಶಿಶುಕೇಂದ್ರ ತೆರೆದು ವಿಧವೆಯರಿಗೆ ಹುಟ್ಟಿದ ಮಕ್ಕಳಿಗೆ ಭಿನ್ನವಾದ ಮಕ್ಕಳ ಕೇಂದ್ರ ಆರಂಭಿಸಿ ಬದುಕು ನೀಡಿದವರ ಹೆಸರಲ್ಲಿ ದೀಪ ಹಚ್ಚಿದರೆ ಬೆಳಕಿಗೂ ಹೆಚ್ಚು ಅರ್ಥ ಮಹತ್ವ ಬಂದೀತು! 1848ರಲ್ಲಿ ತಳಸಮುದಾಯದ ಹೆಣ್ಣು ಮಕ್ಕಳಿಗೆ ಶಾಲೆ, 1855ರಲ್ಲಿ ಕೂಲಿ ಕಾರ್ಮಿಕರಿಗೆ ರಾತ್ರಿ ಪಾಳಿಶಾಲೆ ತೆರೆದವರು ಮಹಾಗುರು ವಿಶ್ವಗುರುವೆನಿಸಬಹುದು ಅನ್ನಿಸುತ್ತದೆ. ಶಿಕ್ಷಣದ ಮತ್ತೊಂದು ಮಹತ್ತರ ಬದಲಾವಣೆಯೆಂದರೆ ವೈಚಾರಿಕ, ತಾರ್ಕಿಕ ಪ್ರಜ್ಞೆ ಮೂಡಿಸುವುದು, ಮೂಢನಂಬಿಕೆ ತೊಲಗಿಸುವುದು ತಾನೆ? ಇವೆರಡನ್ನೂ ಸಾಧಿಸ ಹೊರಟವರು ಮಾತೆ ಸಾವಿತ್ರಿಯವರು. ಪೌರೋಹಿತ್ಯವಿಲ್ಲದೆ ವಿವಾಹಗಳನ್ನು ನೆರವೇರಿಸಿದುದು, ಸಮಾಜದ ಅರ್ಥಾತ್ ನಿಜಶಿಕ್ಷಕಿಯಾದ ಈಕೆ ಬಾಲ್ಯವಿವಾಹ, ಸತಿಸಹಗಮನ, ವಿಧವೆಯರಿಗೆ ಕೇಶಮುಂಡನದಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ಸಿಡಿದೆದ್ದರೂ ಅವರಿಗಾಗಿ ಅಬಲಾಶ್ರಮಗಳನ್ನು ಸ್ಥಾಪಿಸಲು ಮರೆಯಲಿಲ್ಲ.

1878 ರಲ್ಲಿ ದಲಿತರಿಗೆ ಕುಡಿಯುವ ನೀರಿನ ಟ್ಯಾಂಕ್ ಸ್ಥಾಪಿಸಿದುದೇ ಅಲ್ಲದೆ, ತಮ್ಮ ಮನೆಯ ಬಾವಿ ನೀರಿನ್ನೂ ಸಾರ್ವಜನಿಕರಿಗೆ ನೀಡಿದುದು ಸಮಾನತೆಗೆ ದುಡಿದ ಉದಾಹರಣೆ. ಪತಿಯೊಡನೆ ದುಡಿಯುತ್ತಾ ಕೆಲಕಾಲ ಸತ್ಯಶೋಧಕ ಸಮಾಜದ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದರು.

2011ರ ಅಂಕಿ ಅಂಶದ ಪ್ರಕಾರ ದೇಶದ 12 ಮಿಲಿಯನ್‌ನಲ್ಲಿ 3 ಮಿಲಿಯನ್ ಹೆಣ್ಣುಮಕ್ಕಳು ತಮ್ಮ 15ನೇ ವರ್ಷದ ಹುಟ್ಟು ಹಬ್ಬವನ್ನೇ ನೋಡುವುದಿಲ್ಲ. ಮಾನವ ಸಂಪನ್ಮೂಲದಲ್ಲಿ 1/2 ದಷ್ಟಿರುವ ಹೆಣ್ಣು ಮಕ್ಕಳನ್ನು ಎಲ್ಲಾ ಹಂತದಲ್ಲೂ ಕಾಯುವ ಕಾರ್ಯ ಅಂದೇ ಯಶಸ್ವಿಗೊಳಿಸಿದ ಈ ತಾಯಿಹೃದಯ ಮತ್ತೆ ಮತ್ತೆ ಜನಿಸಬೇಕು. ಸದಾ ಅವರ ಗಮನವು ಕಲ್ಯಾಣ ಹಾಗೂ ಲಿಂಗತ್ವ ಸೂಕ್ಷ್ಮತೆಯನ್ನು ಮೂಡಿಸುವ ಅಂಶಗಳಿರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೇ ಆಗಿತ್ತು. ಇಂದು ಅದಕ್ಕಾಗಿ ನೂರಾರು ಸಾವಿರಾರು ಸಂಘಗಳು ಆಯೋಗ ವೇದಿಕೆ, ಮಂಡಳಿಗಳು ಸೃಷ್ಟಿಯಾಗಿವೆ.

ಆದರೆ ಅಂದಿನ ಪರಿಸ್ಥಿತಿಯಲ್ಲಿ ಯಾರ ಬೆಂಬಲವೂ ಇರದೆ ಸ್ತ್ರೀಯ ಉದ್ಧಾರಕ್ಕಾಗಿ ಹೋರಾಡಿದುದು ಮೈನವಿರೇಳಿಸುವಂತದ್ದು. ನಮಗೂ ಕೂಡ ಇವಳನ್ನು "ಸ್ತ್ರೀ ಎಂದರೆ ಅಷ್ಟೇ ಸಾಕೆ" ಎಂದು ಕೇಳಬೇಕೆನಿಸುತ್ತದೆ. ಹಾಗೆಯೇ ಹೆಣ್ಣಿನ ಪರಿಶ್ರಮ ಮಮತೆ ದುಡಿಮೆ ಪ್ರತಿಬಿಂಬಿಸುವ ಸಾಲುಗಳಾದ–

ಪುಟ 10 ಕ್ಕೆ ➤

**ಮೌಲ್ಯೋಪಾಸನೆ**

# ಅಮೂಲ್ಯ ರತ್ನ ಯಾವುದು?



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ರತ್ನಗಿರಿಯ ರಾಜ ರತ್ನಪ್ರಿಯ. ಹೆಸರಿಗೆ ತಕ್ಕಂತೆ ಅವನಿಗೆ ರತ್ನ, ವಜ್ರ ವೈಡೂರ್ಯಗಳೆಂದರೆ ಅತಿಪ್ರೀತಿ. ತನ್ನ ರತ್ನ ಭಂಡಾರದಲ್ಲಿ ಎಲ್ಲ ಬಗೆಯ ರತ್ನಗಳೂ ಇರಬೇಕೆಂಬ ಬಯಕೆ. ಅದಕ್ಕಾಗಿ ರಾಜ್ಯದಲ್ಲಿ ಡಂಗೂರ ಹೊಡೆಸಿದ. ರಾಜನ ಸೇವಕರು ರಾಜ್ಯದ ಮೂಲೆ ಮೂಲೆಗೆ ಹೋಗಿ "ಯಾರಲ್ಲಾದರೂ ಅಮೂಲ್ಯರತ್ನವಿದ್ದರೆ ಅದನ್ನು ರಾಜನಿಗೆ ತಂದು ಒಪ್ಪಿಸಬೇಕು" ಇಲ್ಲವಾದರಲ್ಲಿ ಅಂತವರನ್ನು ನೇಣುಹಾಕುವುದಾಗಿ ಡಂಗೂರ ಸಾರಿದರು. ಜೀವಭಯದಿಂದ ಅನೇಕರು ತಮ್ಮಲ್ಲಿದ್ದ ಅಪರೂಪದ ರತ್ನಗಳನ್ನು ತಂದು ರಾಜನಿಗೆ ಒಪ್ಪಿಸಿದರು. ರತ್ನಗಳ ಭಂಡಾರ ತುಂಬಿ ತುಳುಕಾಡುತ್ತಿತ್ತು. ರತ್ನಗಳ ಸಂಗ್ರಹ ಹೆಚ್ಚಿದಂತೆಲ್ಲಾ ರಾಜನ ದುರಾಸೆ ಹೆಚ್ಚುತ್ತಾ ಹೋಯಿತು. ರತ್ನ ಭಂಡಾರದಲ್ಲಿ ರತ್ನಗಳ ಶೇಖರಣೆಗೆ ಸ್ಥಳ ಸಾಲದಾಯಿತು. ರಾಜ ತನ್ನ ಆಪ್ತರ ಸಲಹೆ ಕೇಳಿದ. ರಾಜನಿಗೆ ಪ್ರಿಯವಾದುದನ್ನೇ ಹೇಳಬೇಕಿದ್ದ ಅವರು ರತ್ನಮಹಲನ್ನು ನಿರ್ಮಿಸುವಂತೆ ಸಲಹೆ ನೀಡಿದರು.

ರಾಜರತ್ನ ಮಹಲನ್ನು ಕಟ್ಟಿಸಲು ಪ್ರಾರಂಭಿಸಿದ. ಒಳಾಂಗಣದ ಗೋಡೆಗಳಿಗೆಲ್ಲಾ ರತ್ನಗಳನ್ನು ಮೆತ್ತಿಸಿದ. ಒಂದು ಪಾರ್ಶ್ವಗೋಡೆಗೆ ರತ್ನಗಳು ಸಾಲಲಿಲ್ಲ. ಪ್ರಜೆಗಳ ಮೇಲೆ ತೆರಿಗೆ ಹೇರಿ ಆ ಹಣದಿಂದ ಬೇರೆ ಬೇರೆ ದೇಶಗಳಿಂದ ರತ್ನ ಖರೀದಿಸಲು ತನ್ನ ಆಪ್ತರನ್ನು ಕಳುಹಿಸಿದ. ಪ್ರಜೆಗಳ ಹಾಹಾಕಾರ ಮುಗಿಲು ಮುಟ್ಟಿತು. ಆದರೆ ರಾಜನ ಭಯ ರಾಜ್ಯದಲ್ಲಿ ಮೌನ ಆವರಿಸಿತು. ಒಮ್ಮೆಗೆ ಪರಮಾನಂದ ಎಂಬ ಓರ್ವ ಸನ್ಯಾಸಿ ಆ ರಾಜ್ಯಕ್ಕೆ ಬಂದ. ರಾಜ್ಯದ ಮೂಲೆ ಮೂಲೆ ಸುತ್ತಿದ. ಪ್ರಜೆಗಳು ತಮ್ಮ ಕಷ್ಟ ಪರಿಹಾರಕ್ಕಾಗಿ ಸನ್ಯಾಸಿಯ ಮೊರೆಹೋದರು. ಸನ್ಯಾಸಿಯ ಇರುವಿಕೆ ರಾಜನಿಗೆ ತಿಳಿದು ಸನ್ಯಾಸಿಯನ್ನು ತನ್ನ ಅರಮನೆಗೆ ಬರಮಾಡಿಕೊಂಡ. ಸನ್ಯಾಸಿಗೆ ಆದರಾತಿಥ್ಯಗಳನ್ನು ಸಲ್ಲಿಸಿ, ತನ್ನ ವಜ್ರ ಖಚಿತ ಮಹಲಿಗೆ ಕರೆದೊಯ್ದು, ತನ್ನ ಮಹಲಿನ ವೈಭವವನ್ನು ವರ್ಣಿಸಿದ. ನಂತರ ಸನ್ಯಾಸಿಯನ್ನು ಕುರಿತು 'ಸ್ವಾಮಿನ್ ತಾವು ದೇಶ ವಿದೇಶಗಳನ್ನು ಸುತ್ತಿದವರು, ಈಗ ಹೇಳಿ ನನ್ನಲ್ಲಿರುವ ಅನರ್ಘ್ಯ ರತ್ನಗಳಿಗಿಂತ ಹೆಚ್ಚಿನ ಬೆಲೆಬಾಳುವ ರತ್ನವನ್ನು ಎಲ್ಲಾದರೂ ಕಂಡಿರುವಿರಾ?' ಎಂದು ಪ್ರಶ್ನಿಸಿದ. ಪರಮಾನಂದ ಸ್ವಾಮೀಜಿ ಘೊಳ್ಳನೆ ನಕ್ಕು 'ರಾಜಾ, ಎಲ್ಲಾದರೂ ಏಕೆ? ನಿನ್ನ ರಾಜ್ಯದಲ್ಲೇ ಈ ಎಲ್ಲ ರತ್ನಗಳಿಗಿಂತ ಶ್ರೇಷ್ಠಮಯ ರತ್ನವಿದೆ. ನಾನದನ್ನು ಕಣ್ಣಾರೆ ಕಂಡಿರುವೆ' ಎಂದರು. ರಾಜನಿಗೆ ಅಪಾರವಾದ ಸಿಟ್ಟು ಬಂದಿತು. 'ಏನು? ತನ್ನ ರಾಜ್ಯದಲ್ಲೇ ಅಂಥ ಶ್ರೇಷ್ಠ ರತ್ನವಿದೆಯೇ? ಎಲ್ಲಿದೆ ತಿಳಿಸಿ. ನಾನೀಗಲೇ ಅದನ್ನು ತರಿಸಿಕೊಳ್ಳುವೆನು' ಎಂದ. ಆಗ ಸನ್ಯಾಸಿ 'ರಾಜನ್ ಆ ರತ್ನವು ನಿನ್ನ ರಾಜಧಾನಿಯ ಹೊರಭಾಗದಲ್ಲಿ ವಾಸಿಸುವ ಮುದುಕಿಯೋರ್ವಳ ಬಳಿ ಇದೆ. ಬಾ ನಾನೇ ನಿನ್ನನ್ನು ಅಲ್ಲಿಗೆ ಕರೆದೊಯ್ಯುವೆ' ಎಂದರು.

ವೇಷ ಮರೆಸಿದ ರಾಜ, ಸನ್ಯಾಸಿಯೊಂದಿಗೆ ಆ ಮುದುಕಿಯ ಗುಡಿಸಿಲಿಗೆ ತೆರಳಿದರು. ಮುದುಕಿ, ತನ್ನಲ್ಲಿದ್ದ ಬೀಸುವ ಕಲ್ಲಿನಲ್ಲಿ ಸುತ್ತಲಿನ ಮನೆಯವರಿಗೆಲ್ಲಾ ರಾಗಿಯನ್ನು ಹಿಟ್ಟು ಮಾಡಿಕೊಟ್ಟು ಅವರಿಂದ ಕೇವಲ ಒಂದು ಹಿಡಿ ಹಿಟ್ಟನ್ನು ಪಡೆದು ಜೀವನ ಸಾಗಿಸುತ್ತಿದ್ದಳು. ರಾಜನಿಗೆ ಆ ಬೀಸುವಕಲ್ಲನ್ನು ನೋಡಿ ನಗು ಬಂತು. ಸನ್ಯಾಸಿಯನ್ನು ಕುರಿತು 'ಸ್ವಾಮಿನ್, ಇದೇ ತಾನೇ ತಾವು ಶ್ರೇಷ್ಠ ರತ್ನವೆಂದು ವರ್ಣಿಸಿದ್ದು. ಇದಾದರೋ ಸಾಧಾರಣ ಕಲ್ಲು. ಇದು ಹೇಗೆ ಶ್ರೇಷ್ಠ ರತ್ನವಾದೀತು'? ಎಂದನು. ಆಗ ಸನ್ಯಾಸಿ 'ರಾಜನ್ ನಿನ್ನಲ್ಲಿರುವ ಎಲ್ಲಾ ರತ್ನಗಳೂ ಕಲ್ಲಿನ ವಿವಿಧ ರೂಪಗಳಲ್ಲವೇ? ಅದಕ್ಕೂ ಈ ಕಲ್ಲಿಗೂ ವ್ಯತ್ಯಾಸವಿರುವುದು ಅದರ ಬಣ್ಣರೂಪಗಳಲ್ಲಿ. ಆದರೆ ಈ ಕಲ್ಲು ಹತ್ತಾರು ಜನಕ್ಕೆ ಉಪಯೋಗವಾಗುತ್ತಿದೆ. ಜತೆಗೆ ಇದರಿಂದ ಈ ಬಡ ಮುದುಕಿಯ ಉದರಂಭರಣವೂ ಆಗುತ್ತಿದೆ. ನೀನು ಪ್ರಜೆಗಳನ್ನು ಹಿಂಸಿಸಿ ಸಂಗ್ರಹಿಸಿರುವ ಆ ಕಲ್ಲುಗಳಿಂದ ಯಾರಿಗೆ ಉಪಯೋಗವಾಗಿದೆ? ಹತ್ತಾರು ಜನರಿಗೆ ಉಪಯೋಗವಾಗುವ ವ್ಯಕ್ತಿಯಾಗಲೀ ಅಥವಾ ವಸ್ತುವಾಗಲೀ ಅದನ್ನೇ ಜಗತ್ತಿನಲ್ಲಿ ಶ್ರೇಷ್ಠವೆನ್ನುವುದು' ಎಂದು ಉಪದೇಶಿಸಿದ. ರಾಜನ ಕಣ್ಣು ತೆರೆಯಿತು ರತ್ನದಾಸೆ ಕಳಚಿ ಪ್ರಜಾರಂಜಕನಾದ.

●

## ಆಂಗ್ಲಭಾಷೆ ಬೋಧಿಸುವ ಶಿಕ್ಷಕರಿಗೆ ಆನ್‌ಲೈನ್ ತರಬೇತಿ ಮಾದರಿಯ ತರಗತಿ

**ಕೆ.ಆರ್.ಪೇಟೆ :** ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘ, ಮಂಡ್ಯ ಜಿಲ್ಲಾ ಘಟಕ ಹಾಗೂ ಸತ್ಯಂ ಎಜುಕೇರ್ ಕಂಪನಿ ಇವರ ಸಂಯುಕ್ತ ಆಶ್ರಯದಲ್ಲಿ ಎಸ್.ಎಸ್.ಎಲ್.ಸಿ ತರಗತಿಗೆ ಆಂಗ್ಲಭಾಷೆ ಬೋಧಿಸುವ ಶಿಕ್ಷಕರಿಗೆ ಆನ್‌ಲೈನ್ ತರಬೇತಿ ಮಾದರಿಯ ತರಗತಿಗಳನ್ನು ಆಯೋಜಿಸಲಾಗಿದೆ.

ಇದು ಶಿಕ್ಷಕರಿಗೆ ಪುನರ್ ಮನನ ತರಬೇತಿಯಾಗಿರುತ್ತದೆ. ಮಕ್ಕಳಿಗೆ ಆಂಗ್ಲಭಾಷೆಯನ್ನು ಸುಲಭವಾಗಿ ಹೇಗೆ ಬೋಧಿಸಬೇಕು. ಕಠಿಣ ಎನ್ನುತ್ತಿರುವ ಆಂಗ್ಲಭಾಷೆಯನ್ನು ಸುಲಭ ಎನ್ನುವಂತಹ ವಾತಾವರಣವನ್ನು ಮಕ್ಕಳಲ್ಲಿ ನಿರ್ಮಿಸುವಂತಹ ಭೋಧನೆಗೆ ಶಿಕ್ಷಕರನ್ನು ಸಜ್ಜುಗೊಳಿಸಲು ಈ ತರಬೇತಿ ಅಗತ್ಯವಾಗಿದೆ. ಮಕ್ಕಳಿಗೆ ಸುಲಭವಾಗಿ ಕಲಿಸುವಂತಹ ತರಬೇತಿಯನ್ನು ಶಿಕ್ಷಕರಿಗೆ ನೀಡಲಾಗುವುದು. ಹಾಗಾಗಿ ಜಿಲ್ಲೆಯ ಎಲ್ಲಾ ಪ್ರೌಢಶಾಲೆಗಳ ಆಂಗ್ಲಭಾಷಾ ಶಿಕ್ಷಕರು ಇದರ ಸದುಪಯೋಗಪಡೆದುಕೊಳ್ಳಬೇಕು. ಸಂಪನ್ಮೂಲ ವ್ಯಕ್ತಿಯಾಗಿ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ಕಮೀಷನರ್ ಕೆ.ಎಲ್.ನಾಗರಾಜು, ಮೈಸೂರು ಇವರು ತಮಗೆ ಆನ್ ಲೈನ್ ಮೂಲಕ ಸಮಗ್ರ ಮಾಹಿತಿ ನೀಡಲಿದ್ದಾರೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಮಂಡ್ಯ ಜಿಲ್ಲಾಧ್ಯಕ್ಷರಾದ ಡಾ.ಕೆ.ಕಾಳೇಗೌಡ, 9448676723 ಹಾಗೂ ಸತ್ಯಂ ಎಜುಕೇರ್ ಕಂಪನಿ ಮ್ಯಾನೇಜಿಂಗ್ ಟ್ರಸ್ಟಿ ರಂಗೇಶ್ ಅರಕೆರೆ ಅವರನ್ನು ಸಂಪರ್ಕಿಲು ಕೋರಲಾಗಿದೆ.

# ಮೌಢ್ಯದ ಪರಧಿಯಿಂದ ಮೂಲ ತತ್ತ್ವದೆಡೆಗೆ ಒಂದು ಪಯಣ

**ಶ್ರೀಮತಿ ಸುನೀತ ಗಂಗಾಧರ್**
**ರಾಮನಗರ**



2020ರ ವರ್ಷದಲ್ಲಿ ಜಾಗತಿಕ ಸಮಸ್ಯೆಯಾಗಿ ಆವರಿಸಿದ ಕೋವಿಡ್–19ನ ವೈರಾಣು ಸೃಷ್ಟಿಸಿದ ಅವಾಂತರ ಈಗಲೂ ಮುಂದುವರೆದಿದೆ. ಈ ರೋಗ ಬರದಂತೆ ತಡೆಗಟ್ಟುವ ವಿಧಾನಗಳಲ್ಲಿ ಪ್ರಬಲವಾಗಿ ಭಾರತೀಯ ಜೀವನಕ್ರಮ ಪರಿಣಾಮಕಾರಿ ಎಂದರಿತು ಜಗತ್ತು ಆ ವಿಧಾನಗಳನ್ನು (ಆಹಾರ, ಯೋಗ, ಧ್ಯಾನ, ಆಯುರ್ವೇದ ಇತ್ಯಾದಿ) ಅಳವಡಿಸಿಕೊಳ್ಳುತ್ತಿದೆ. ಈಗ ಜಗತ್ತಿಗೆ ಭಾರತೀಯ ತತ್ವ, ಪದ್ಧತಿಗಳ ಮಹತ್ವ ತಿಳಿಯುತ್ತಿದೆ ಎಂದು ಹಲವು ಭಾರತೀಯರು ಅಭಿಪ್ರಾಯಪಟ್ಟರು. ಆದರೆ ಇದೇ ಪೂರ್ಣ ಸತ್ಯವಲ್ಲ. ಭಾರತೀಯ ಪರಂಪರೆ, ಪದ್ಧತಿ, ತತ್ತ್ವಗಳ ಮಹತ್ವ ಹಾಗೂ ಆಳ ಈ ನೆಲದವರಿಗಿಂತ ಚೆನ್ನಾಗಿ ಬಲ್ಲವರು ಮತ್ತು ಲಾಭಗಳಿಸುತ್ತಿರುವವರು ಪರಕೀಯರೇ, ಇದರ ಸತ್ಯಾಸತ್ಯತೆ ತಿಳಿಯಬೇಕಾದರೆ ವಸ್ತುನಿಷ್ಠ ಇತಿಹಾಸದ ಪುಟಗಳನ್ನು ತಿರುವಿಹಾಕಲೇಬೇಕು. ವರ್ತಮಾನದ ಮರದ ಬೇರು ಭೂತಕಾಲದ ಕಾಲಗರ್ಭದಲ್ಲಡಿಗಿದೆ. ಅದರತ್ತ ಒಂದು ಹಿನ್ನೋಟ.

ಈ ಪ್ರಪಂಚದಲ್ಲಿ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ನಾಗರೀಕತೆ, ಸಂಸ್ಕೃತಿ ಪರಂಪರೆ ಹೊಂದಿದ್ದು ಅದು ಆ ದೇಶದ ಅಸ್ಮಿತೆಯಾಗಿರುತ್ತದೆ. ಯಾವ ರಾಷ್ಟ್ರದ ಪ್ರಾಣ ಶಕ್ತಿಯಾದ ಆ ಅಸ್ಮಿತೆಯು ನಾಶವಾಗಿ ಹೋಗಿರುತ್ತದೋ ಅದು ಚೇತನವೇ ಇಲ್ಲದ ಶರೀರದಂತೆ ನಿಸ್ತೇಜವೇ ಆಗಿ ಹೋಗುತ್ತದೆ.

ಸ್ವಾಮಿ ವಿವೇಕಾನಂದರು ಹೇಳಿದಂತೆ "ಭಾರತದ ಪ್ರಾಣಶಕ್ತಿಯು ಹಿಂದುತ್ವದಲ್ಲಿದೆ ಮತ್ತು ಹಿಂದೂಗಳು ತಮ್ಮ ಪೂರ್ವಜನರಿಂದ ಬಂದಿರುವ ಆ ಪರಂಪರೆಯನ್ನು ಮರೆಯದಿದ್ದಲ್ಲಿ ಭೂಮಿಯ ಮೇಲಿನ ಯಾವ ಶಕ್ತಿಯು ಅವರನ್ನು ನಾಶ ಮಾಡಲಾಗದು"

ಈಗಿನ ದುರ್ದೈವವೆಂದರೆ ಪರಕೀಯರಿಗಿಂತಲೂ ಮುಂದೆ ಈ ಮಾತೃಭೂಮಿಯ ಪರಂಪರೆ, ಘನತೆ, ಹೆಗ್ಗಳಿಕೆಯನ್ನು ಅವಮಾನಿಸುವುದು, ಹೀಯಾಳಿಸುವುದೇ ಬಹು ದೊಡ್ಡ ಗೌರವದ ಸಂಕೇತವೆಂದು ವ್ಯವಸ್ಥಿತವಾಗಿ ಮಾಡುತ್ತಿರುವ ಸಮೂಹಗಳೇ ಸೃಷ್ಟಿಯಾಗಿದ್ದು, ಯಾವ ಹೊರಶಕ್ತಿಗಳು ಇವುಗಳನ್ನು ಪೋಷಿಸುತ್ತಿರುವುದು ಎಂದು ತಿಳಿಯುವುದರ ಜೊತೆಗೆ ನಮ್ಮ ಎಲ್ಲ ಜನರು ಈ ಮಾತೃಭೂಮಿಯ ಅಂತರ್ ಸತ್ವವೇನು ಎಂಬುದನ್ನು ಪ್ರಥಮತಃ ತಿಳಿದುಕೊಳ್ಳಬೇಕಿರುವುದು ನಮ್ಮೆಲ್ಲರ ಅಸ್ತಿತ್ವದ ಉಳಿವಿಗಾಗಿ ಅನಿವಾರ್ಯವೂ ಕೂಡ ಆಗಿದೆ.

ಸರ್ವ ರಂಗಗಳಲ್ಲೂ ಮುಂಚೂಣಿಯಲ್ಲಿದ್ದು ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ರಾಷ್ಟ್ರವಾಗಿದ್ದ ಭಾರತದ ಅಧಃಪತನ ಆರಂಭವಾದದ್ದೆ ಒಂದು ಕೈಯಲ್ಲಿ ಕತ್ತಿ ಇನ್ನೊಂದು ಕೈಯಲ್ಲಿ ಧರ್ಮಗ್ರಂಥ ಹಿಡಿದು ಮತಾಂತರವೆಂಬ ದಳ್ಳುರಿ ಹಚ್ಚಿದ ಮತಾಂಧರಿಂದ. ಇಸ್ಲಾಂಮೇತರರು ಕಾಫೀರರು ಎಂಬ ಮನೋಧೋರಣೆಯನ್ನು ಹೊತ್ತು ಕ್ರಿ.ಶ 711 ರಲ್ಲಿ ಸಿಂಧ್‌ನಿಂದ ಪ್ರಾರಂಭಿಸಿದ ಹಿಂದೂ ಪರಂಪರೆಯ ನಾಶದ ಕಿಚ್ಚು ಇನ್ನೂ ತನಕ ಹಲವು ಸ್ವರೂಪಗಳಲ್ಲಿ ಈಗಲೂ ದಹದಹಿಸುತ್ತಿರುವುದು ಕಾಣಬಹುದಾಗಿದೆ. ಮಹಮ್ಮದ್ ಬಿನ್ಕಾಸಿಂನ ಮೋಸದ ಯುದ್ಧ ನೀತಿಗೆ ಬಲಿಯಾದ ಸಿಂಧ್‌ನ ದಾಹಿರ್ ರಾಜ ಅತ್ಯಾಚಾರಿಗಳ ಕೈಗೆ ಸಿಗದಂತೆ ಜೋಹರ್ ಆಚರಿಸಿದ ಆತನ ರಾಣಿ, ಸೆರೆಯಾಳಾಗಿದ್ದ ರಾಜನ ಇಬ್ಬರು ಪುತ್ರಿಯರು ದೇಹತ್ಯಾಗ ಮಾಡಿ ಹುತಾತ್ಮರಾದದ್ದು ಈ ನೆಲದ ಸಂಸ್ಕೃತಿ ಉಳಿಸುವುದಕ್ಕೋಸ್ಕರ. ಅತೀ ದುರ್ದೈವದ ಊರೆ ಸಿಂಧ್‌ನ ದೇಬಲವೆಂಬುದು ಅಲ್ಲಿ ಕಾಸಿಂನ ಸೈನ್ಯ ಅತ್ಯಾಚಾರ, ಕೊಲೆ ಸುಲಿಗೆ, ಲೂಟಿ ಜೊತೆಗೆ ಮಾಡಿದ ಕಾರ್ಯ ಮತಾಂತರ. ಇಲ್ಲಿ ಪ್ರಪ್ರಥಮಾತಃ ಮತಾಂತರಗೊಂಡ ವ್ಯಕ್ತಿಯನ್ನು ಮೌಲಾನಿ ಇಸ್ಲಾಮಿ ಎಂದು ಕರೆಯಲಾಯಿತು. ಮುಂದಿನದು ಬಹುದೊಡ್ಡ ಇತಿಹಾಸ. ಕಲೆ, ಸಾಹಿತ್ಯ, ಸಂಪತ್ತು ಸ್ತ್ರೀಯ ಸ್ವಾತಂತ್ರ್ಯಪಹರಣ ಅತ್ಯಾಚಾರ, ದೌರ್ಜನ್ಯ, ಆರ್ಥಿಕ, ಸಾಮಾಜಿಕ, ಬೌದ್ಧಿಕವಾಗಿ ತತ್ತರಿಸಿ ಹೋಗುವಂತಹ ಆಘಾತ ಇವರದ್ದೊಂದು ಮಾರಣಾಂತಿಕ, ಕಾರ್ಯದ ಭಾಸವಾದರೆ ಇನ್ನೊಂದೆಡೆಗೆ ಮತ್ತೊಂದು ಆಘಾತ ಬ್ರಿಟಿಷರಿಂದ ತಮ್ಮ ನಾಗರೀಕತೆಗೂ ಮುಂಚಿತ, ತಮಗೆ ಗೊತ್ತಿಲ್ಲದೆ ಕಾಲಖಂಡವನ್ನು ಕತ್ತಲೆಯ ಯುಗ ಎಂದು ಘೋಷಿಸುವ ಪಾಶ್ಚಾತ್ಯರು, ಭಾರತವನ್ನು ಜಗತ್ತಿಗೆ ಪರಿಚಯಿಸಿದವರು ಹಾಗೂ ನಾಗರೀಕರನ್ನಾಗಿ ಮಾಡಿದವರು. ತಾವೇ ಎಂದು ಬಿಂಬಿಸಿದ್ದರು. ಅವರ ಅಸತ್ಯವನ್ನೇ ಸತ್ಯವೆಂದು ನಂಬುವಂತಹ ವಾತಾವರಣ ಸೃಷ್ಟಿಸಿದ್ದು ಅವರ ಹೆಗ್ಗಳಿಕೆ. ಕ್ರಿಶ್ಚಿಯನ್ನರಲ್ಲದವರು ಪೇಗನ್‌ಗಳೆಂದು ತುಚ್ಛೀಕರಿಸುವ, ವ್ಯಾಪಾರಸ್ಥರ ಸೋಗಿನಲ್ಲಿ ತಕ್ಕಡಿ ಹಿಡಿದು ಒಂದರಲ್ಲಿ ರಾಜದಂಡ ಇನ್ನೊಂದರಲ್ಲಿ ತಮ್ಮ ಧರ್ಮಗ್ರಂಥ ಹಿಡಿದು ಮತಾಂತರದ ಹುನ್ನಾರದೊಡನೆ ಭಾರತಕ್ಕೆ ಕಾಲಿಟ್ಟ ಬ್ರಿಟೀಷರು ಅತ್ಯಂತ ತೀಕ್ಷ್ಣಮತಿಗಳು. ಇವರು ಕಂಡುಕೊಂಡ ಸತ್ಯವೇ ಭಾರತೀಯರು ವಿಶ್ವಕ್ಕೆ ವಿಶ್ವಗುರುವಾಗುವ ಅಷ್ಟೂ ಜ್ಞಾನ ಸಂಪತ್ತು ಹೊಂದಿರುವರೆಂದು. ಅವರು ಮಾಡಿದ ಪ್ರಮುಖ ಕೆಲಸಗಳಲ್ಲೊಂದು ನಮ್ಮ ಸಂಸ್ಕೃತಿಯ ಮೂಲಗ್ರಂಥ ಉಪನಿಷತ್ತು, ಸ್ಮೃತಿಗಳು, ಖಗೋಳ, ಜ್ಯೋತಿಷ್ಯ, ಗಣಿತ, ನೌಕಾಯಾನ ಕಲೆಗಳು, ಸುಶ್ರುತ, ಬೋಧಾಯನ, ಬಾಸ್ಕರಾಚಾರ್ಯರ ಏಣಿಸಲಸದಳ ಹೊತ್ತಿಗೆಗಳನ್ನು ತಮ್ಮೊಂದಿಗೆ ಕೊಂಡೊಯ್ದದ್ದಲ್ಲದೇ ಸಂಸ್ಕೃತ ಕಲಿತು ಜೊತೆಗೆ ಪಂಡಿತರನ್ನು ತಮ್ಮ ಜೊತೆಗೆ ಕರೆದೊಯ್ದರು. ಗುರುಕುಲ ಪರಂಪರೆಯ ಅಂತ್ಯವೇ ಅವರ ಧ್ಯೆರ್ಯ ಹಾಗೂ ವಿಜಯವಾಗಿತ್ತು. ಮೆಕಾಲೆ ಶಿಕ್ಷಣ ಪದ್ಧತಿ ಬೌದ್ಧಿಕ ಗುಲಾಮಗಿರಿಯನ್ನು ಜಾರಿಗೆ ತರುವ ಅವರ ಒಂದು ರಾಜಕೀಯ ದಾಳದ ಭಾಗವೇ ಆಗಿತ್ತು. ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಶಬ್ದ ಸಂಪತ್ತು ಹೊಂದಿರುವ ಭಾಷೆಯಾದ ಸಂಸ್ಕೃತ, ಆಗಿನ ಕಾಲದಲ್ಲಿ ಭಾರತದ ಆಡುಭಾಷೆಯೂ ಆಗಿ ಬಳಕೆಯಲ್ಲಿತ್ತು. ಅದು ಮೇಲ್ವರ್ಗದವರ ದಬ್ಬಾಳಿಕೆ ಪ್ರತೀಕ, ಬ್ರಾಹ್ಮಣರ ಭಾಷೆ ಹೀಗೆ ಅದರ ವರ್ಚಸ್ಸು ಕುಂದಿಸಿ ಸಂಪೂರ್ಣ ಅಳಿಸಿಹಾಕಿದ್ದು, ಭಾರತದ ಮುಂದಿನ ಪೀಳಿಗೆ ಸಂಪೂರ್ಣ ಸಂಸ್ಕೃತದಲ್ಲೇ ವಿರಚಿತವಾದ ಮಹಾನ್ ಶ್ರುತಿ, ಸ್ಮೃತಿ, ಧರ್ಮಗ್ರಂಥ ಇನ್ನಿತರೇ ಅತ್ಯಮೂಲ್ಯ ಜ್ಞಾನಭಂಡಾರದೆಡೆ ಆಸಕ್ತಿ ವಹಿಸದಿರಲೆಂದು ಮಟ್ಟ ಹಾಕಿಬಿಟ್ಟರು. ಆದರೆ ಸಂಸ್ಕೃತದ ಮಹತ್ವ ಗೊತ್ತಿದ್ದರಿಂದಲೇ ಇಂದು ಇತರೆ ದೇಶಗಳು ತಮ್ಮ ದೇಶದಲ್ಲಿ ಸ್ಥಾನ ನೀಡಿದ್ದಾರೆ. ಉದಾ ಸಂಸ್ಕೃತ ಭಾಷೆ ವೈಜ್ಞಾನಿಕ ಭಾಷೆ ಆಗಿದ್ದು, ನಾಸಾದಲ್ಲಿ ಅದನ್ನು ಅಧ್ಯಯನ ಮಾಡಲು ವಿಭಾಗವಿದೆ. ಆ ಹೊತ್ತಿನ 60 450

ಪುಟ 9ಕ್ಕೆ

➢ ಪುಟ 8 ರಿಂದ.....

ವಿಶ್ವವಿದ್ಯಾಲಗಳಲ್ಲಿ ಸಂಸ್ಕೃತ ಕಲಿಸಲಾಗುತ್ತಿದೆ. ಲಂಡನ್ ನಗರದ ಶಾಲೆಯೊಂದರಲ್ಲಿ ಸೆಂಟ್ ಜೇಮ್ಸ್ ಇಂಡಿಪೆಂಡೆಂಟ್ ಸ್ಕೂಲ್ ಒಂದನೆ ತರಗತಿಯಿಂದಲೇ ಸಂಸ್ಕೃತ ಕಡ್ಡಾಯ. ಹಲವು ದೇಶಗಳ ಶಾಲೆಗಳಲ್ಲಿ ಪ್ರಾರ್ಥನೆಯಲ್ಲಿ ಗಾಯತ್ರಿಮಂತ್ರವನ್ನು ಹೇಳಿಸಲಾಗುತ್ತದೆ. ಏಕೆಂದರೆ ಈ ಮಂತ್ರವು ಒಂದು ಕ್ಷಣಕ್ಕೆ 11,000 ಧ್ವನಿತರಂಗ ಉತ್ಪಾದಿಸುತ್ತದೆಂದು ಸಂಶೋಧನೆ ಮೂಲಕವೂ ಕಂಡುಕೊಂಡಿದ್ದಾರೆ. ಭಾಸ್ಕರಚಾರ್ಯನ (5ನೇ ಶತಮಾನ) ಖಗೋಳತಜ್ಞನ ಸೂರ್ಯನ ಸುತ್ತ ಭೂಮಿ ಸುತ್ತಲೂ ತೆಗೆದುಕೊಳ್ಳುವ ಸಮಯ, 11ನೇ ಶತಮಾನದ ಶ್ರೀಧರಾಚಾರ್ಯನ ವರ್ಗ ಸಮೀಕರಣ, ಸುಶ್ರುತನ ಶಸ್ತ್ರಚಿಕಿತ್ಸಾ ಗ್ರಂಥ, ಒಂದೇ ಎರಡೇ. ನಮ್ಮವರ ಜ್ಞಾನದ ಭಂಡಾರ ಸೂರೆ ಮಾಡಿ ತಮ್ಮ ಹೆಸರಿನ ಲೇಬಲ್ ಹಾಕಿ ಜಗತ್ತಿನೆದುರು ಭಾರತವನ್ನು ಕಡುಬಡವರ, ಗುಲಾಮರ, ಹಾವಾಡಿಗರ ದೇಶವೆಂದು ಬಿಂಬಿಸಿದಷ್ಟು ಸಾಕಾಗದೇ ನಮ್ಮ ದೇಶಕ್ಕೆ ಸಂಬಂಧಿಸಿದ ಪ್ರತಿಯೊಂದನ್ನು ವಿರೋಧಿಸುವ ಚಾರ್ವಾಕರ ಪಡೆಯನ್ನೇ ಸೃಷ್ಟಿಸಿ ಪೋಷಿಸುತ್ತಿದ್ದು, ಅವರ ಕಾರಣದಿಂದಾಗಿಯೇ ಇಂದು ನಮ್ಮ ಸನಾತನಿಗಳ ಜನಪನಿಯರ, ದಾರ್ಶನಿಕ, ಹಿರಿಯರ ಅನುಭವ ವೇದ್ಯ ರೀತಿ–ನೀತಿ, ಪದ್ಧತಿಗಳನ್ನು ಕೀಳರಿಮೆಯಿಂದ ಕಾಣುವ, ತಿರುಚುವ, ಕೊನೆಗಾಣಿಸುವ ಪ್ರಯತ್ನ ನಡೆಯುತ್ತಲೇ ಇದೆ. ಯುವ ಸಮೂಹ ಪಾಶ್ಚಾತ್ಯರ ಅನುಕರಣೆಯಲ್ಲಿ ಅತಿಯಾಗಿ ಮುಳುಗಿ ಹೋಗಿರುವುದು ಖೇದಕರ ಸಂಗತಿ. ಮೈಕ್ರೋ ಫ್ಯಾಮಿಲಿ, ಐಚ್ಛಾರ್ಭಗರ ಸಂಪ್ರದಾಯ, ಅರೆಬರೆ ಬಟ್ಟೆಯ, ತಡರಾತ್ರಿಯ ಪಾರ್ಟಿ, ಪೂಜೆ – ಪುನಸ್ಕಾರ ಮೌಢ್ಯತೆ ಎನ್ನುವ, ಮಾತೃಭಾಷೆ ಆಡುವುದು ತಮ್ಮ ಅಂತಸ್ತಿಗೆ ಅಗೌರವ ತಂದುಕೊಂಡಂತೆ. ಇಂಗ್ಲೀಷ್ ಮಾತನಾಡುವುದು, ಅವರಂತೆ, ಭಾಷೆ, ಬಟ್ಟೆ, ತಿನಿಸು ಜೀವನಶೈಲಿ (ಬೆಡ್ ಕಾಫಿ, ಯಾವಾಗಲೂ ಸ್ನಾನ, ಲಿವಿಂಗ್ ಇನ್, ಮದ್ಯಸೇವನೆ) ಸಮಾನತೆ ಹೆಸರಿನಲ್ಲಿ ಮುಂದುವರಿಕೆಯ ನಾಗರೀಕ ಸಮುದಾಯದ ಪ್ರತಿಕವೆಂದು ಅತಿಯಾದ ಸ್ವೇಚ್ಛಾಚಾರ, ಭಾವನೆಗಳೇ ಸತ್ತ ಸಂಬಂಧ ಇವೆಲ್ಲಾ ಭಾರತದಲ್ಲಿ ಕಾಣುತ್ತಿರುವ ದೌರ್ಭಾಗ್ಯ ಕರುಣಿಸಿದ್ದು ನಮ್ಮನ್ನಾಳಿದ ಶಕ್ತಿಗಳೇ. ಒಂದು ಸಮಾಧಾನದ ಸಂಗತಿಯೆಂದರೆ ಹಲವರಲ್ಲಿ ನಮ್ಮ ಹಿಂದಿನ ವೈಭವ ಭಾರತದ ಸಂಸ್ಕೃತಿ, ಪರಂಪರೆ ಅರಿಯುವ ಆಸಕ್ತಿ ಹೊಂದಿ ಆ ದಿಶೆಯತ್ತ ಪ್ರಯತ್ನಿಸುತ್ತಿರುವುದು ಸಂತಸದ ವಿಚಾರವೇ. ಬ್ರಿಟಿಷರಿಗೆ, ಮೊಘಲರಿಗೆ ರಾಜಕೀಯ ಬಲಿಷ್ಠತೆಗೆ ಬೇಕಿದ್ದ ಅಸ್ತ್ರವಾಗಿ ಜಾತಿಪದ್ಧತಿ, ಭೇದನೀತಿ, ಬಾಲ್ಯವಿವಾಹ, ಸಹಗಮನ, ಜೋಹರ್, ವರ್ಣತಾರತಮ್ಯಗಳಂತ ಪರಿಸ್ಥಿತಿಯ ನಿರ್ಮಾಣ ಮಾಡಿ ವೇದಗಳ ಅರ್ಥಗಳನ್ನೇ ತಿರುಚಿ ಅಸಮಂಜಸವಾದ ರೀತಿ–ನೀತಿಗಳು ಈ ದೇಶದ ಪರಂಪರೆಯೇ ಎಂದು ಶತಮಾನಗಳ ಕಾಲ ಅಚ್ಚೊತ್ತಿಬಿಟ್ಟರು. ಮೇಲಿನ ಯಾವುವೂ ನಮ್ಮ ಪರಂಪರೆಯಲ್ಲಾ ವೈದಿಕ ಕಾಲದಿಂದಲೂ ಸ್ತ್ರೀ ಸ್ಥಾನಮಾನ, ಸಾಮಾಜಿಕ ಸ್ಥಿತಿ–ಗತಿಗಳ ಕುರಿತು ಅಧ್ಯಯನ ನಡೆಸಿದರೆ ನಿಮಗೆ ಆ ಸತ್ಯ ಗೋಚರವಾಗುತ್ತದೆ.

ಸನಾತನ ಶ್ರುತಿ (ವೇದ) ಸ್ಮೃತಿಗಳಲ್ಲಿ, ಧರ್ಮಶಾಸ್ತ್ರಗಳಲ್ಲಿ ಶಾಶ್ವತ ತತ್ತ್ವಗಳ ಉಲ್ಲೇಖವಿದ್ದು, ಹಲವಾರು ಋಷಿ–ಮಹರ್ಷಿಗಳು ಯಾವೆಲ್ಲಾ ಸಂಸ್ಕಾರ ವಿಧಿಗಳನ್ನು ಹೇಗೆ ಯಾವ ರೀತಿಯಾಗಿ, ಆಯಾ ಯುಗ ಧರ್ಮಕ್ಕನುಗುಣವಾಗಿ ಆಚರಿಸಿದರೆ ಮನುಕುಲಕ್ಕೆ ಒಳಿತಾಗುವುದೆಂದು ಹೇಳಿದ್ದಾರೆ.

ಭಾರತೀಯರ ಜೀವನ ಶ್ರಮಗಳಲ್ಲಿ ಹಾಸುಹೊಕ್ಕಾದ/ಹೊಕ್ಕಾಗಿದ್ದ ಹಲ–ಕೆಲವು ಆಚರಣೆಗಳಾದ ಕೌಟುಂಬಿಕ ಮೌಲ್ಯಗಳು(ಪ್ರತಿದಿನದ ಸ್ನಾನ, ಧ್ಯಾನ, ಪೂಜೆ, ಸ್ವಚ್ಛತೆ, ದಾನ, ಅತಿಥಿ ಸತ್ಕಾರ, ರಂಗೋಲಿ, ನಮಸ್ಕಾರ, ಸಂಧ್ಯಾವಂದನೆ, ಹಬ್ಬ–ಹರಿದಿನಗಳ ಆಚರಣೆ, ಆಯಾ–ಮನೆಗಳಲ್ಲಿ ಅದರದೇ ಆದ ಕೆಲ ನಿಯಮಗಳು) ಇವೆಲ್ಲಾ ಉಸಿರಾಟದಂತೆ ಸಹಜ ಕ್ರಿಯೆಗಳಾಗಿದ್ದವು. ಜಾತ್ರೆ, ರಥೋತ್ಸವ, ಊರ ಹಬ್ಬ, ಸಾಮಾಜಿಕ ಭಾಂದವ್ಯ ಗಟ್ಟಿಗೊಳಿಸುವಂತಹ ಆಚರಣೆಗಳಾಗಿದ್ದವು. ಈ ರೀತಿ–ರಿವಾಜು, ಆಚರಣೆಗಳಲ್ಲಿ ಮನುಷ್ಯನ ಹಿತ–ದೃಷ್ಟಿಯಿಂದ ಬಳಸಿದಂತೆ/ಬಳಸುತ್ತಿದ್ದ ಸಾಮಗ್ರಿಗಳು ಆಯಾ ಋತು–ಮಾಸಕ್ಕೆ ಅನುಗುಣವಾಗಿ ದೊರಕುವಂತೇ ಆಗಿರುವುದು ನಮ್ಮ ಹಿರಿಯರ ಬುದ್ಧಿಮತ್ತೆಗೆ ಹಿಡಿದ ಕನ್ನಡಿಯಾಗಿದೆ. ಉದಾ– ಹವನದ ಸಾಮಗ್ರಿ, ಪ್ರದಕ್ಷಿಣೆ, ಮಂತ್ರೋಚ್ಚಾರ, ನದಿಸ್ನಾನ, ಉಪವಾಸ, ಫಲ–ಪುಷ್ಪಗಳ ಬಳಕೆ (ಕರ್ಪೂರ, ತೆಂಗು, ಬಾಳೆ, ಗರಿಕೆ, ನೆಲ್ಲಿ, ರುದ್ರಾಕ್ಷಿ, ಎಕ್ಕದೆಲೆ, ಅರಿಶಿಣ, ಕುಂಕುಮ) ಹೀಗೆ ಕೊನೆ ಮೊದಲಿಲ್ಲದ ಪರಿಕರಗಳ ಹಿನ್ನೆಲೆ. ಅವುಗಳ ವೈಜ್ಞಾನಿಕ ಉಪಯೋಗ, ಪರಿಣಾಮ ಎಲ್ಲವನ್ನೂ ತಿಳಿದುಕೊಳ್ಳಲು ಪ್ರಯತ್ನಿಸಿ, ಆಗ ನಿಜಕ್ಕೂ ನಮ್ಮ ಈ ನೆಲದ ಸಂಜಾತರ ಜ್ಞಾನಕ್ಕೆ ತಲೆಬಾಗದೆ ಇರಲಾರಿರಿ.. ಇವೆಲ್ಲಾ ಗೊತ್ತಿದ್ದೆ ಹೊರಗಿನ ಆ ದುಷ್ಟ ಶಕ್ತಿಗಳು ಅವೆಲ್ಲವುಗಳ ಕಡೆ ನಮ್ಮ ಗಮನ ಹೋಗದಂತೆ ಶ್ರಮಿಸಿದ್ದರು. ಈಗಂತೂ ಮಾಹಿತಿ ಸಂಗ್ರಹಣೆ ಅಂಗೈಯಲ್ಲಿರುವ ತಂತ್ರಜ್ಞಾನ ಮುಖಾಂತರ ನಿರಾಯಾಸವಾಗಿ ದೊರಕುವುದರಿಂದ ಮೇಲೆ ಹೇಳಿದ ವಿಷಯ, ವಸ್ತುಗಳ ಸತ್ಯಾಸತ್ಯತೆ, ವೈಜ್ಞಾನಿಕ ಹಿನ್ನೆಲೆ ಗಮನಿಸಿದಲ್ಲಿ ಅಗಾಧ ವಿಷಯ ಮಾಹಿತಿ ದೊರಕುತ್ತದೆ. (ಇಲ್ಲಿ ಹಲವಾರು ಆಕರಗಳ ಮಾಹಿತಿ ಅಂಕಿ ಅಂಶ ಬಳಸಿದ್ದೇನೆ). "ಮೂಢನಂಬಿಕೆಯಲ್ಲಾ, ಮೂಲನಂಬಿಕೆ" ಎಂಬ ಸೂಚಿತ ವಿಷಯದ ಮೇಲೆ ಕಳೆದ ಒಂದು ವರ್ಷಾವಧಿಯಲ್ಲಿ ವಿಷಯಗಳನ್ನು ಹಂಚಿಕೊಂಡಿದ್ದೆ. "ಹಿಂದೂ ಜೀವನದ ನೀತಿ–ನಿಯಮಗಳ ಸಾರವೇ ಯಮನಿಯಮ" ಎನ್ನುವರು ಬೃಹತ್ ಪರಂಪರೆಯ ಒಂದು ಚಿಕ್ಕ ಟಿಸಿಲು ಮಾತ್ರವದು. ನಾರದರಂತಹ ಸಕಲ ವೇದ ವೇದಾಂತ ಪಾರಂಗತರೆ ತಾವು ಕಲಿತದ್ದು ಕೇವಲ ಗ್ರಂಥದ ಹೊರ ಹೊದಿಕೆಯ ಸಮಾನ ಒಳಗಿನ ಕಲಿಕೆ ಇನ್ನೂ ಸಾಕಷ್ಟಿದೆ ಎಂದಂತೆ. ನಮ್ಮ ಇತಿಹಾಸದ ಆಳ– ವಿಸ್ತೃತ ಅಗಾಧವಿದೆ. ತಿಳಿಯುವ, ಕಲಿಯುವ ಮನಸಿರಬೇಕು. ಈಗ ತಿಳಿದದ್ದಷ್ಟೇ ಕೊನೆಯಲ್ಲಿ ಜ್ಞಾನದ ಹಾದಿ ನಿರಂತರ ಅನಂತ ಪಯಣವಿದ್ದಂತೆ. ●

➢ ಪುಟ 5 ರಿಂದ.....

ಕೆಮ್ಮಿಗೆ ತಾವೇ ನೀಲಗಿರಿತೈಲ, ಮಾತ್ರೆ, ಮುಲಾಮು ತಂದು ಬಳಸುತ್ತಿದ್ದರು. ಹೀಗೆ ಆರು ವರ್ಷಗಳು ಕಳೆದವು.

ಕ್ರಮೇಣ ಮಕ್ಕಳಿಗೆ ಸಮೀಪದಲ್ಲಿ ಪ್ರವಾಸಕ್ಕೆ ಕರೆದೊಯ್ಯುವುದು, ವಾರಕ್ಕೊಬ್ಬರ ಮನೆಯಲ್ಲಿ ಭಜನೆ, ಮಕ್ಕಳಿಂದ ತರಕಾರಿಯ ಕೈತೋಟ, ವನಭೋಜನ, ಜಾತಿಭೇದವಿಲ್ಲದ ವಾತಾವರಣ, ಒಂದೊಂದಾಗಿ ಊರಿನ ಸ್ವರೂಪವನ್ನೇ ಬದಲಿಸಿತ್ತು. ಅಂದು ಇವರು ಕಲಿಸಿದ ಮಕ್ಕಳು ಸಮಾಜದಲ್ಲಿ ಉನ್ನತಸ್ಥಾನ ಪಡೆದಿದ್ದಾರೆ. ಸತ್ಪ್ರಜೆಗಳಾಗಿ ಬದುಕುತ್ತಿದ್ದಾರೆ.

ಇಂತಹ ಚಿರಸ್ಮರಣೀಯ, ಆದರ್ಶ ಗುರುಗಳಿಗೆ ಇಡೀ ಸಮಾಜ, ದೇಶ ಕೃತಜ್ಞತೆಯನ್ನು ಸಲ್ಲಿಸುತ್ತದೆ. ನಾವೂ ಹೀಗಾಗಬಹುದೆ? ●

➢ ಪುಟ 6 ರಿಂದ.....

**ಅವಳ ಹೆಸರ ಹೇಳಬೇಡ**
**ಊರನರಸಿ ಹಣಿಯಬೇಡ**
**ಹೆಣ್ಣೆ ಅವಳ ಹೊತ್ತ ಹೆಸರು**
**ಹೆಣ್ಣೆ ಅವಳ ಹೆತ್ತ ಬಸಿರು** ... ನೆನಪಾಗುತ್ತವೆ.

ಹೀಗಾಗಿ ತಾಯಿಯೆಂದರೆ ಕೇವಲ ಮಾತೆಯಲ್ಲ, ಅಕ್ಷರ ತರ್ಕಗಳ ಮೂಲಕ ಚರಿತ್ರೆ ಸೃಷ್ಟಿಸಿದವರು. ತನು–ಮನ ಅರ್ಪಿಸಿ ದುಡಿದವರು. 1856 ರಲ್ಲಿ ಬಾಂಬೆ ಪ್ರೆಸಿಡೆನ್ಸಿಯ ಭಾಗವಾಗಿದ್ದ ಕರ್ನಾಟಕದ ಧಾರವಾಡದಲ್ಲಿ ಮಹರ್‌ಜಾತಿಗೆ ಸೇರಿದ ಹುಡುಗನಿಗೆ ಶಾಲಾ ದಾಖಲಾತಿ ಸಿಕ್ಕಾಗ ಅನೇಕ ಸುಸಂಸ್ಕೃತ ಜನ ಪ್ರತಿಭಟಿಸಿದರು. ಬ್ರಿಟೀಷರೂ ಇದಕ್ಕೆ ಸೊಪ್ಪು ಹಾಕಲಿಲ್ಲ. ಆಗೆಲ್ಲಾ ಸಾವಿತ್ರಿಬಾಯಿ ಪುಲೆಯವರು ವಂಚಿತ ಸಮುದಾಯಕ್ಕಾಗಿ ದನಿಯಾದರು. ಶಿಕ್ಷಣ, ಉದ್ಯೋಗ ಮೀಸಲಾತಿಗೆ ಮೈಸೂರು ಸಂಸ್ಥಾನದ ಗಮನವನ್ನೂ ಸೆಳೆದರು. ಏನೇ ಆಗಲಿ ಪಾಠ ಹೇಳಿಕೊಡಲು ಹೋದಾಗೆಲ್ಲಾ ಸೆಗಣಿ, ಕೆಸರು, ಮೊಟ್ಟೆ ಕೊಳೆತ ಟಮಾಟೋಗಳಿಂದ ಎರಚಿಸಿಕೊಂಡು ಅಸಹ್ಯಪಡದೆ ದಿಟ್ಟತನದಿಂದ ವಿದ್ಯೆ ಕಲಿಸಿದ ಇವರ ಧೈರ್ಯ ಯಾವ ಸಾಹಸಕ್ಕೂ ಕಡಿಮೆಯಿಲ್ಲ.

ಹಾಗೆ ನೋಡಬೇಕೆಂದರೆ ಸಾಹಿತ್ಯ ಕ್ಷೇತ್ರದಲ್ಲೂ ಕೈಯಾಡಿಸಿದ ಈಕೆ ಅಂದಿನ ಸಮಾಜದ ಸ್ಥಿತಿಗತಿಗಳನ್ನು ಬಿಂಬಿಸುವ ಕಾವ್ಯಪುಲೆ (ಕಾವ್ಯ ಅರಳಿದೆ) ಎಂಬ ಕವನಸಂಕಲನ 1854ರಲ್ಲಿ ಹೊರತಂದರು. 1891ರಲ್ಲಿ ಭುವನಕಾಶಿ ಸುಬೋಧ ರತ್ನಾಕರ (ಅಪ್ಪಟ ಮುತ್ತುಗಳ ಸಾಗರ) ಪತಿ ಜ್ಯೋತಿಬಾರವರ ಒಳಗೊಂಡು ಬರೆದ ಆತ್ಮಕಥೆ ಅದಾಗಿತ್ತು. 1891 ಎಂಬ ಇಸವಿ ಕೂಡ ಐತಿಹಾಸಿಕ ಮಹತ್ವದ್ದು. ಡಾ॥ ಬಾಬಾಸಾಹೇಬ್ ಅಂಬೇಡ್ಕರ್ ಜನಿಸಿದ ವರ್ಷವೂ ಹೌದು. ಅದೇ ಅಪ್ಪಟ ಮುತ್ತುಗಳ ಸಾಗರದಿಂದ ಸೃಷ್ಟಿಯಾದ ಅಮೂಲ್ಯರತ್ನ ಮತ್ತೊಂದು ಶಕ್ತಿ ಅಂಬೇಡ್ಕರರವರೆನಿಸುತ್ತದೆ. ಮಾತೆ ಸಾವಿತ್ರಿಬಾಯಿಪುಲೆಯವರು ಸದಾ ಅವರ ಪಾಲಿಗೆ ಪ್ರಾತಃ ಸ್ಮರಣೀಯರಾಗಿದ್ದರು. 1892ರಲ್ಲಿ ಸಾವಿತ್ರಿಪುಲೆಯವರು ಜ್ಯೋತಿಬಾರವರ ಭಾಷಣಗಳ ಸಂಪಾದಿಸಿದರು. ಕರ್ಜ್ (ಸಾಲ) ಎಂಬ ಸಾಮಾಜಿಕ ಕೃತಿಯನ್ನು ರಚಿಸಿದರು.

ಪಶ್ಚಿಮ ಬಂಗಾಳ ಹಾಗೂ ಮಹಾರಾಷ್ಟ್ರದಂತಹ ಕ್ಷಾಮ ಪೀಡಿತ ಪ್ರದೇಶಗಳಲ್ಲಿ 2 ವರ್ಷ ಕಾರ್ಯ ನಿರ್ವಹಿಸಿದರು. 1897ರ ಮಾರ್ಚ್ 10 ರಂದು ಪ್ಲೇಗ್ ಪೀಡಿತ ರೋಗಿಗಳ ಸೇವೆಯಲ್ಲಿರುವಾಗಲೇ ತೀರಿಹೋದರು. ಆದರೆ ಅವರ ಬದುಕು ನಿಲುವುಗಳು ಸದಾ ಆದರ್ಶವಾಗಿರಬೇಕು. ತಲೆಬಾಗಿ ನಮಸ್ಕರಿಸುವ ಸರದಿ ನಮ್ಮದಾಗಲಿ, ಅವರ ವ್ಯಕ್ತಿತ್ವ ನಮಗೆ ಸ್ಫೂರ್ತಿಯಾಗಲಿ, ಆ ಮಹಾನ್ ಚೇತನಕ್ಕೆ ಶತಕೋಟಿ ಪ್ರಣಾಮಗಳು. ●

**ಕೋರೋನ ಕಾರಣದಿಂದ ಶಿಕ್ಷಕ ಸಮಾಚಾರದ ಕಳೆದ ಐದು ಸಂಚಿಕೆ ವೆಬ್‌ನಲ್ಲಿ ಪ್ರಕಟಗೊಳ್ಳುತ್ತಿದ್ದುದು ತಮಗೆಲ್ಲಾ ತಿಳಿದಿದೆ. ಸೆಪ್ಟೆಂಬರ್ ತಿಂಗಳಿನಿಂದ ಪತ್ರಿಕೆ ಮುದ್ರಣಗೊಂಡು ತಮ್ಮ ಕೈ ಸೇರುತ್ತಿರುವುದು ಸಂತೋಷದ ಸಂಗತಿ. ಚಂದಾದಾರರು ತಮ್ಮ ಚಂದಾ ಅವಧಿ ಮುಕ್ತಾಯವಾಗಿದ್ದಲ್ಲಿ ಚಂದಾ ಹಣವನ್ನು ಪಾವತಿಸಬೇಕಾಗಿ ವಿನಂತಿ.**

**ಸಂಪಾದಕರು : ಜೆ. ಎಂ. ಜೋಶಿ**

# ರಾಷ್ಟ್ರೀಯ ಶಿಕ್ಷಣ ನೀತಿ 2020 ವಿಚಾರ ಗೋಷ್ಠಿ

## –: ಬೆಳಗಾವಿ :–

ದಿನಾಂಕ 10.09.2020 ರಂದು ಬೆಳಿಗ್ಗೆ 11.00 ಘಂಟೆಯಿಂದ 01.00 ಘಂಟೆಯವರೆಗೆ ರಾಷ್ಟ್ರೀಯ ಶಿಕ್ಷಣ ನೀತಿಯ ವಿಚಾರ ಗೋಷ್ಠಿಯು ಆನ್‌ಲೈನ್‌ನಲ್ಲಿ ಗೂಗಲ್‌ಮೀಟ್ ಮುಖಾಂತರ ಜರುಗಿತು. ಗೋಷ್ಠಿಯು ಶ್ರೀ ಆರ್.ಎಸ್.ಭಟ್ಟ ಇವರ ಪ್ರಾರ್ಥನೆಯಿಂದ ಪ್ರಾರಂಭವಾಯಿತು.

ಜಿಲ್ಲಾ ಅಧ್ಯಕ್ಷರಾದ ಶ್ರೀ ಏಕನಾಥ ಜಿ.ಪಾಟೀಲ್‌ರವರು ಎಲ್ಲರನ್ನು ಸ್ವಾಗತಿಸಿದರು. ಶ್ರೀ ಭಾಸ್ಕರ ದೇಶಪಾಂಡೆಯವರು ಮುಖ್ಯ ವಕ್ತಾರರಾಗಿ ಕಾರ್ಯಕ್ರಮಕ್ಕೆ ಆಗಮಿಸಿ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಘಟನೆಯ ಕಾರ್ಯಾಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರುಣ್ ಶಹಾಪುರ್‌ರವರು, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್, ರಾಜ್ಯ ಖಜಾಂಚಿಗಳಾದ ಶ್ರೀ ಜೋಶಿರವರು ಭಾಗವಹಿಸಿದ್ದರು. ಅಲ್ಲದೆ ನಮಗೆಲ್ಲಾ ಹಿರಿಯರು, ಮಾರ್ಗದರ್ಶಕರಾದ ಶ್ರೀ ಅಶೋಕ್‌ರವರು ಕೂಡ ಭಾಗವಹಿಸಿದ್ದರು. ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತಾಗಿ ಸುದೀರ್ಘ ಚರ್ಚೆಯನ್ನು ಮಾಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ಉಮೇಶ್ ಕುಲಕರ್ಣಿಯವರು ಉಪಸ್ಥಿತರಿದ್ದ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

## –: ರಾಮನಗರ :–

ದಿನಾಂಕ 13–9–2020 ರಂದು ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ರಾಮನಗರ ಜಿಲ್ಲೆಯಿಂದ ಸಭೆ ನಡೆಸಲಾಯಿತು. ಸಭೆಯಲ್ಲಿ ರಾಮನಗರ ಜಿಲ್ಲೆಯ 80ಕ್ಕಿಂತ ಹೆಚ್ಚು ಶಿಕ್ಷಕರು ಸಭೆಯಲ್ಲಿ ಭಾಗವಹಿಸಿದ್ದರು. ಎಬಿಆರ್‌ಎಸ್‌ಎಂನ ರಾಷ್ಟ್ರೀಯ ಮಹಿಳಾ ಸಹ ಕಾರ್ಯದರ್ಶಿಗಳಾದ ಮಮತ.ಡಿ.ಕೆಯವರ ಸರಸ್ವತಿ ವಂದನೆಯಿಂದ ಕಾರ್ಯಕ್ರಮ ಪ್ರಾರಂಭವಾಯಿತು. ರಾಜ್ಯಪ್ರತಿನಿಧಿ ಸಿದ್ದಲಿಂಗ ಸ್ವಾಮಿಯವರು ಸ್ವಾಗತಿಸಿದರು. ಜಿಲ್ಲಾ ಘಟಕದ ಅಧ್ಯಕ್ಷರಾದ ಸಿ.ವಿ ಜಯಣ್ಣನವರು ಪ್ರಾಸ್ತಾವಿಕವಾಗಿ ಮಾತನಾಡಿ ಶಿಕ್ಷಣ ನೀತಿ ನಡೆದು ಬಂದ ದಾರಿಯನ್ನು ತಿಳಿಸಿದರು. ನಂತರ ಮಾನ್ಯ ಶ್ರೀ ರಘುನಂದನ್‌ಜಿ ರವರನ್ನು ರಾಜ್ಯ ಸಹಕಾರ್ಯದರ್ಶಿಗಳಾದ ಗಂಗಾಧರಾಚಾರಿಯವರು ಪರಿಚಯಿಸಿದರು. ನಂತರ ಉಪನ್ಯಾಸವನ್ನು ನೀಡುತ್ತಾ ಮಾತನಾಡಿದ ರಘುನಂದನ್‌ಜಿಯವರು ಹಿಂದಿನ ರಾಷ್ಟ್ರೀಯ ಶಿಕ್ಷಣ ನೀತಿಯು ಬ್ರಿಟಿಷರ ಹಿಡಿತದಲ್ಲಿ ಇದ್ದು, ಅವರು ಅನುಸರಿಸಿಕೊಂಡು ಬಂದ ವಿಚಾರಗಳು, ಸ್ವಾತಂತ್ರ್ಯ ನಂತರ ಬಂದ ಶಿಕ್ಷಣ ನಿಯಮಗಳು, ಅದರಲ್ಲಿ ಬಂದ ಲೋಪ ದೋಷಗಳು 1986 ಶಿಕ್ಷಣ ನೀತಿ ವಿಚಾರಗಳನ್ನು ವಿವರವಾಗಿ ವಿವರಿಸಿ ಶಿಕ್ಷಣದಲ್ಲಿ ಬದಲಾವಣೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು. 2020ರ ರಾಷ್ಟ್ರೀಯ ಶಿಕ್ಷಣ ನೀತಿಯ ಅವಶ್ಯಕತೆ, 1 ರಿಂದ 12ನೇ ತರಗತಿಯ ಹಂತಗಳನ್ನು ಹೇಳಿದರು. ಹೊಸ ಶಿಕ್ಷಣ ನೀತಿಯಲ್ಲಿ ಇರುವ ಪ್ರಮುಖ ಹನ್ನೊಂದು ಅಂಶಗಳನ್ನು ವಿವಸಿದರು. ಪ್ರಸ್ತುತ ಸನ್ನಿವೇಶದಲ್ಲಿ ಹೊಸ ಶಿಕ್ಷಣ ನೀತಿ ಬಗ್ಗೆ ಸವಿವರವಾಗಿ ವಿವರಿಸಿದರು. ನಂತರ ಶಿಕ್ಷಕರ ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾದ ರಘುನಂದನ್‌ಜಿಯವರನ್ನು ಅಭಿನಂದಿಸಲಾಯಿತು. ರಾಜ್ಯಕಾರ್ಯದರ್ಶಿಗಳಿಂದ ಚಿದಾನಂದ ಪಾಟೀಲ್‌ರವರು ರಾಜ್ಯ ಜಿಲ್ಲಾ ಘಟಕದ ಈ ಕಾರ್ಯಕ್ರಮವನ್ನು ಕುರಿತು ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಅಧ್ಯಕ್ಷರಾದ ಸಂದೀಪ್ ಬೂದಿಹಾಳ್, ಖಜಾಂಜಿ ಜೆ.ಎಂ ಜೋಶಿ, ತಾ॥ ಅಧ್ಯಕ್ಷರು, ಜಿಲ್ಲಾಘಟಕದ ಪದಾಧಿಕಾರಿಗಳು ಭಾಗವಹಿಸಿದ್ದರು. ಸುಮಂಗಲರವರು ವಂದಿಸಿದರು. ಜಿಲ್ಲಾಘಟಕದ ಕಾರ್ಯದರ್ಶಿಗಳಿಂದ ಚೆನ್ನೇಗೌಡ ಬಿ. ಯವರು ಕಾರ್ಯಕ್ರಮವನ್ನು ನಿರೂಪಿಸಿದರು. ●

# ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ

## ಶ್ರೀ ಜೆ. ಪಿ. ಸಿಂಘಾಲರವರ ದೃಷ್ಟಿಕೋನ

■ ಡಾ. ಶಿಲ್ಪಾ ಚರಂತಿಮಠ

ದಿನಾಂಕ 06.09.2020 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು "ರಾಷ್ಟ್ರೀಯ ಶಿಕ್ಷಣ ನೀತಿ 2020" ಎಂಬ ವಿಷಯದ ಬಗ್ಗೆ ವಿಚಾರಸಂಕಿರಣವನ್ನು ಆನ್‌ಲೈನ್‌ನಲ್ಲಿ ಏರ್ಪಡಿಸಿತ್ತು. ಮುಖ್ಯ ವಕ್ತಾರರಾಗಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಅಧ್ಯಕ್ಷರಾದ ಶ್ರೀ ಜೆ.ಪಿ ಸಿಂಘಾಲ್‌ಜೀಯವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಜೆ.ಪಿ.ಸಿಂಘಾಲ್‌ಜಿಯವರ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಈ ಕೆಳಗಿನಂತೆ ವರದಿ ಮಾಡಲಾಗಿದೆ.

ಈ ಕಾರ್ಯಕ್ರಮದಲ್ಲಿ ಉಪಸ್ಥಿತ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಎಲ್ಲ ಮಹಾನುಭಾವರಿಗೆ ನಮಸ್ಕಾರವನ್ನು ಸಲ್ಲಿಸುತ್ತಾ,

ಈ ವಿಷಯದ ಬಗ್ಗೆ ನನ್ನ ಅನುಭವಗಳ ಆಧಾರದ ಮೇಲೆ ತಮ್ಮೊಂದಿಗೆ ಮಾತನಾಡುತ್ತಿರುವುದು ನನ್ನ ಸೌಭಾಗ್ಯ. 1986 ರಲ್ಲಿ ಒಂದು ಶಿಕ್ಷಣ ನೀತಿ ಬಂದಿತ್ತು, 1992ರಲ್ಲಿ ಅದರಲ್ಲಿ ಕೆಲವು ಸಂಶೋಧನೆಗಳನ್ನು ಮಾಡಿ ಕೆಲವು ಸುಧಾರಣೆಗಳನ್ನು ಮಾಡಲಾಯಿತು. ಅದರೆ 34 ವರ್ಷಗಳ ನಂತರ ಬಂದ ಶಿಕ್ಷಣ ನೀತಿಯೇ ರಾಷ್ಟ್ರೀಯ ಶಿಕ್ಷಣ ನೀತಿ 2020. ಏಕೆ ಈ ನೀತಿಯು ದೇಶಕ್ಕೆ ಅತೀ ಜರೂರಾಗಿತ್ತು ? 1986 ರಿಂದ 2020 ರವರೆಗೆ ಅನೇಕ ಬದಲಾವಣೆಗಳಾಗಿವೆ. ಅವು ರಾಜಕೀಯ ಬದಲಾವಣೆಗಳಾಗಿರಬಹುದು, ಆರ್ಥಿಕ ಬದಲಾವಣೆಗಳಾಗಿರಬಹುದು, ಸಾಮಾಜಿಕ ಬದಲಾವಣೆಗಳಾಗಿರಬಹುದು, ತಂತ್ರಜ್ಞಾನದಲ್ಲಿನ ಬದಲಾವಣೆಗಳಾಗಿರಬಹುದು. ಈ ಎಲ್ಲ ಬದಲಾವಣೆಗಳನ್ನು ನಾವು ತಲುಪಬೇಕಾಗಿತ್ತು. ಹಾಗಾಗಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಯು ಈ ಎರಡು ಶಿಕ್ಷಣ ನೀತಿಗಳ ನಡುವಿನ ಎಲ್ಲ ಬದಲಾವಣೆಗಳಿಗೆ ಉತ್ತರವಾಗಿ ಹೊರಹೊಮ್ಮಿದೆ. ಈ ಬದಲಾವಣೆಗಳು ಅನೇಕ ಸವಾಲುಗಳನ್ನೂ ಹುಟ್ಟುಹಾಕುತ್ತವೆ. ಭಾರತದ ಶಿಕ್ಷಣ ನೀತಿಯು ಸವಾಲುಗಳಿಂದ ಕೂಡಿದೆ. ಇಲ್ಲಿನ ಶಿಕ್ಷಣದ ಗುಣಮಟ್ಟವು ಅಷ್ಟೊಂದು ಉತ್ತಮವಾಗಿಲ್ಲ. ಏಕೆಂದರೆ ಇದರಲ್ಲಿ ಸಾಕಷ್ಟು ವಾಣಿಜ್ಯೀಕರಣವಿದೆ, ವಿಭಾಗೀಕರಣವಿದೆ. ಮೂಲತಃ ಇದರಲ್ಲಿ ಅಂತರ್ಗತತೆ ಇಲ್ಲ, ದೊಡ್ಡ ಪ್ರಮಾಣದ ಜನರನ್ನು ತಲುಪುವುದು ಸುಲಭಸಾಧ್ಯವಾಗಿಲ್ಲ. ಸಮಾನತೆಯ ವ್ಯವಸ್ಥೆಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿಲ್ಲ. ಹೀಗೆ ಭಾರತದಲ್ಲಿನ ವ್ಯವಸ್ಥೆಯ ಬಗ್ಗೆ ಅನೇಕ ವಿಷಯಗಳನ್ನು ಬೇರೆ–ಬೇರೆ ವ್ಯಕ್ತಿಗಳು ಉಲ್ಲೇಖಿಸುತ್ತಿರುತ್ತಾರೆ. ಇಂತಹ ಅನೇಕ ಸವಾಲುಗಳು ನಮ್ಮ ಮುಂದೆ ಇದ್ದದ್ದಕ್ಕಾಗಿ, ಈ ಸವಾಲುಗಳನ್ನು ಎದುರಿಸುವುದು ಹೇಗೆ ಎಂದು ಯೋಚಿಸಿದಾಗ, ಒಂದು ಉತ್ತಮ ನೀತಿಯ ದಸ್ತಾವೇಜನ್ನು ತಯಾರು ಮಾಡುವುದು, ಅದರಲ್ಲಿ ಈ ಎಲ್ಲ ಪರಿವರ್ತನೆಗಳನ್ನು ಹಾಗೂ ಸವಾಲುಗಳನ್ನು ಸರಿಯಾದ ಕ್ರಮದಲ್ಲಿ ಮೆಟ್ಟಿನಿಲ್ಲಬಹುದಾಗಿರಬೇಕು. ನಾನು ABRSM ನ ಸದಸ್ಯನಾಗಿ ಶಿಕ್ಷಣ ನೀತಿಯ ಚೌಕಟ್ಟನ್ನು ತಯಾರಿಸುವಾಗ ಶ್ರೀ ಕಸ್ತೂರಿ ರಂಗನ್ ರವರ ಮತ್ತು ಅದಕ್ಕೂ ಮೊದಲು ಶ್ರೀ ಸುಬ್ರಮಣ್ಯಂ ರವರ ಅಧ್ಯಕ್ಷತೆಯಲ್ಲಿನ ಡ್ರಾಫ್ಟಿಂಗ್ ಕಮೀಟಿಯಲ್ಲಿ ಅನೇಕ ಸದಸ್ಯರೊಂದಿಗೆ ಚರ್ಚಿಸುವ ಅವಕಾಶಗಳು ಒದಗಿದವು. ಅನೇಕಾನೇಕ ಬಾರಿ ಚರ್ಚಿಸಲಾಗಿ, ಮಹಾಸಂಘದ, ಶಿಕ್ಷಕರ, ಸಮಾಜದ ಹಾಗೂ ಮಧ್ಯಸ್ಥಗಾರರ ಅಭಿಪ್ರಾಯಗಳನ್ನು ಈ ಕಮೀಟಿಯ ಮುಂದೆ, ಸರಕಾರದ ಮತ್ತು ಶಾಸನದ ಮುಂದೆ ಇಟ್ಟೆವು. ನಮ್ಮ ಅಧಿಕಾಧಿಕ ಮಾತುಗಳನ್ನು ಇದರಲ್ಲಿ ಅಳವಡಿಸಿಕೊಳ್ಳಲಾಯಿತು ಎಂದು ಹೇಳಲು ನಮಗೆ ಸಂತೋಷವಾಗುತ್ತಿದೆ. ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದಿಂದ ನಾವು ಧ್ವನಿ ಎತ್ತಿದ ವಿಷಯಗಳು ಈ ಕಮೀಟಿಯಿಂದ ಒಪ್ಪಿಕ್ಕೊಳ್ಳಲ್ಪಟ್ಟವು. ಏಕೆಂದರೆ ಅವೆಲ್ಲವೂ ತಾರ್ಕಿಕವಾಗಿದ್ದವು ಹಾಗೂ ತಮ್ಮಂತಹ ಮಹಾನುಭಾವರ ಅನುಭವಗಳ ಆಧಾರದ ಮೇಲೆ ರಚಿಸಲ್ಪಟ್ಟಿದ್ದವಾಗಿದ್ದವು. ಅನೇಕ ಬಾರಿ ನಮಗೆ ಮಾತನಾಡಲು ಅವಕಾಶಗಳು ದೊರೆತವು. ಈ ನೀತಿಯ ದೃಷ್ಟಿಕೋನಗಳೇನಾಗಿರಬೇಕೆಂದು ಯೋಚಿಸುತ್ತಿರುವಾಗ, ನಮಗೆ ಕೆಲವು ಮೂಲ ಸಮಸ್ಯೆಗಳು ಎದುರಾದವು. ಈ ನೀತಿಯು ಸಮಗ್ರ ಶಿಕ್ಷಣವನ್ನು ಒದಗಿಸಲೇಬೇಕಾಗಿತ್ತು. ಇದನ್ನು ವಿಭಾಗೀಕರಣಾಧಾರಿತ ಶಿಕ್ಷಣದಿಂದ ಸಮಗ್ರ ಶಿಕ್ಷಣದೆಡೆಗೆ ಕೊಂಡೊಯ್ಯುಬೇಕಾಗಿತ್ತು, ಸರ್ವಾಂಗೀಣ ವಿಕಾಸಕ್ಕಾಗಿ ಶಿಕ್ಷಣವಿರಬೇಕಾಗಿತ್ತು. ಈಗಿನ ಶಿಕ್ಷಣವು ಸರ್ವಾಂಗೀಣ ವಿಕಾಸವನ್ನು ಮಾಡುತ್ತಿಲ್ಲ. ಬಹು ಶಿಸ್ತಿನ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಾಗಿತ್ತು. ಅದರಲ್ಲಿ ಮತ್ತೊಂದು ಅತ್ಯಂತ ಮಹತ್ವವಾದ ಅಂಶವೇನೆಂದರೆ ಇಲ್ಲಿಯವರೆಗೆ ಭಾರತದಲ್ಲಿ ನೀಡುತ್ತಿರುವ ಶಿಕ್ಷಣವು ಮೆಕಾಲೆ ಶಿಕ್ಷಣ ನೀತಿಯನ್ನಾಧರಿಸಿತ್ತು ಅಥವಾ ಪಾಶ್ಚಾತ್ಯ ಶಿಕ್ಷಣ ನೀತಿಯನ್ನಾಧರಿಸಿತ್ತು. ಅದನ್ನೇ ನಾವು ಅನುಸರಿಸುತ್ತಿದ್ದೆವು. ಈಗ ಇದನ್ನು ಮೆಕಾಲೆ ಕೇಂದ್ರಿತ ಶಿಕ್ಷಣದಿಂದ, ಪಾಶ್ಚಾತ್ಯ ಕೇಂದ್ರಿತ ಶಿಕ್ಷಣದಿಂದ ಭಾರತ ಕೇಂದ್ರಿತ ಶಿಕ್ಷಣವನ್ನಾಗಿ ಪರಿವರ್ತಿಸಬೇಕಾಗಿತ್ತು. ನಮ್ಮ ಆಲೋಚನೆಯಲ್ಲಷ್ಟೇ ಭಾರತ ಕೇಂದ್ರಿತವಾಗಿರದೇ ನಮ್ಮ ಕರ್ಮದಲ್ಲಿ, ನಮ್ಮ ಬುದ್ಧಿಶಕ್ತಿಯಲ್ಲಿ. ನಮ್ಮ ಚೇತನದಲ್ಲಿ ಮತ್ತು ನಮ್ಮ ನಡವಳಿಕೆಯಲ್ಲಿಯೂ ಭಾರತ ಕೇಂದ್ರಿತವಾಗಿರಬೇಕು. ಭಾರತೀಯ ಮೌಲ್ಯಗಳು, ಭಾರತೀಯ ಸಂಸ್ಕೃತಿ, ಭಾರತೀಯ ಅಂಶಗಳು, ಭಾರತೀಯ ವೈಜ್ಞಾನಿಕ ಮಾತುಗಳನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕಾಗಿತ್ತು. ಇಂತಹ ದೃಷ್ಟಿಯನ್ನು ಇಟ್ಟುಕೊಳ್ಳಲಾಯಿತು. ಅಲ್ಲದೇ ಮಾನ್ಯ ಪ್ರಧಾನಮಂತ್ರಿಗಳು 'ನಾವು ಜಗತ್ತಿಗೆ ಒಂದು ಜ್ಞಾನದ ಶಕ್ತಿಶಾಲಿ ಆಕರವಾಗಬೇಕು' ಹಾಗೂ ಭಾರತವು ವಿಶ್ವ ಗುರುವಿನ ಸ್ಥಾನವನ್ನು ಪಡೆಯಬೇಕು. ಭಾರತವು ವಿಶ್ವ ಗುರುವಿನ ಸ್ಥಾನದಲ್ಲಿತ್ತು ಎಂದು ಹೇಳುವ ಬದಲು ವಿಶ್ವ ಗುರುವಿನ ಸ್ಥಾನದಲ್ಲಿದೆ ಎಂದು ಹೇಳುವಂತಾಗಬೇಕು, ಎಂದು ಹೇಳಿದ ಮಾತನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಗ್ರ ಶಿಕ್ಷಣ, ಅಂತರ್ಗತ ಶಿಕ್ಷಣ, ಸಮಾನ ಶಿಕ್ಷಣ ಈ ಎಲ್ಲವುಗಳನ್ನು ಒಳಗೊಂಡ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. ಇದು ಅತ್ಯಂತ ಸಮಗ್ರ ಹಾಗೂ ಐತಿಹಾಸಿಕ ದಾಖಲೆಯಾಯಿತು. ನವ ಭಾರತದ ನಿರ್ಮಾಣಕ್ಕಾಗಿ ಈ ಶಿಕ್ಷಣ ನೀತಿಯು ಅಡಿಪಾಯವಾಗಬಹುದೆಂದು ಅರಿತು ಇದರ ಕಾರ್ಯವನ್ನು ಪ್ರಾರಂಭಿಸಿದೆವು. ಈ ದಾಖಲೆಯಲ್ಲಿ 27 ಅಧ್ಯಾಯಗಳಿವೆ. ಅದರಲ್ಲಿ 9 ದಾಖಲೆಗಳು ಶಾಲಾ ಶಿಕ್ಷಣಕ್ಕೆ ಮೀಸಲು, 11 ಅಧ್ಯಾಯಗಳು ಉನ್ನತ ಶಿಕ್ಷಣಕ್ಕೆ ಮೀಸಲು ಹಾಗೂ 7 ಅಧ್ಯಾಯಗಳು ಇತರೆಗೆ ಮೀಸಲಾಗಿವೆ. ಇದೊಂದು ಸಮಗ್ರ ದಾಖಲೆಯಾಗಿರವುದರಿಂದ ಇದನ್ನು ಅಕ್ಷರಕ್ಷರವಾಗಿ ಓದಿ ತಿಳಿದುಕೊಳ್ಳಲು ಪ್ರಯತ್ನಿಸಿರಿ ಹಾಗೂ ಇದನ್ನು ಯಾವ ರೀತಿ ಕಾರ್ಯಗತಗೊಳಿಸಬಹುದೆಂಬ ಬಗ್ಗೆಯೂ ಯೋಚಿಸಿರಿ. ಈ ಸಂದರ್ಭದಲ್ಲಿ ನಾನು ಕರ್ನಾಟಕ ರಾಜ್ಯ ಸರಕಾರಕ್ಕೆ ಹಾಗೂ ಒಐಅ ಯವರಾದ ಶ್ರೀ ಅರುಣ ಶಹಾಪುರರವರಿಗೆ ಶುಭಾಶಯಗಳನ್ನು ಅರ್ಪಿಸಲು ಇಚ್ಛಿಸುತ್ತೇನೆ. ಇವರು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ನಾನು ಅನೇಕ ಕಡೆಗಳಲ್ಲಿ ಹೇಳಿಕೊಂಡಿರುವೆನು. ನಾನು ಹಿಮಾಚಲ ಪ್ರದೇಶ ಸರ್ಕಾರದೊಂದಿಗೆ ಮಾತನಾಡುವಾಗಲೂ, ಗೋಷ್ಠಿಯಲ್ಲಿ ಮಂತ್ರಿಗಳು, ಸದಸ್ಯರುಗಳೊಂದಿಗೆ ಮಾತನಾಡುವಾಗಲೂ ಈ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳಲು ಕರ್ನಾಟಕ ಸರಕಾರವು ತಯಾರಿಸಿದ ಮಾದರಿಯು ಅತ್ಯುತ್ತಮವಾಗಿರುವುದರ ಬಗ್ಗೆ ಹೇಳಿರುತ್ತೇನೆ. ನಾವು ಅನೇಕ ಅಂಶಗಳನ್ನು ಕೊಡುತ್ತಿದ್ದರೂ ಪ್ರಾರಂಭದಲ್ಲಿ ಈ ಮಾದರಿಯನ್ನು ಅಳವಡಿಸಿಕೊಳ್ಳಲು ಉತ್ತಮವಾಗಿದೆ ಎಂದು ಹೇಳಿರುತ್ತೇನೆ.

ಕರ್ನಾಟಕ ಸರಕಾರವು ಈ ನಿಟ್ಟಿನಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಿದೆ. ಅರುಣ್ ಶಹಾಪುರರಂತಹ ಶಿಕ್ಷಕರ ಪ್ರತಿನಿಧಿಗಳು ಇಲ್ಲಿರುವುದು ಹಾಗೂ ಇದರ ಅನುಷ್ಠಾನದ ಬಗ್ಗೆ ನಮಗೆ ಸಂತೋಷವಿದೆ.

ನಾವು ಚೌಕಟ್ಟನ್ನು ನಿರ್ಮಿಸುವಾಗ ಶಾಲೆಗಳಲ್ಲಿ ಶಿಕ್ಷಣದ ಬೇಡಿಕೆಯನ್ನು ಅರ್ಥೈಸಿಕೊಂಡು ಕಲಿಯುವುದರ ಮೇಲೆ, ಪ್ರಜಾಪ್ರಭುತ್ವೀಕರಣದ ಮೇಲೆ, ಉತ್ತಮ ಆಡಳಿತದ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ ಎಂಬುದನ್ನು ಎತ್ತಿಹಿಡಿದಿದ್ದೇವೆ. ಒಂದು ಸಮೀಕ್ಷೆಯ ಪ್ರಕಾರ 5ನೇ ತರಗತಿಯ ವಿದ್ಯಾರ್ಥಿಯು 2ನೇ ತರಗತಿಯ ಪುಸ್ತಕವನ್ನು ಓದಲು ಅಸರ್ಥನಾಗಿದ್ದಾನೆ. 4–5ನೇ ತರಗತಿಯ ವಿದ್ಯಾರ್ಥಿಯು 2ನೇ ತರಗತಿಯ ಗಣಿತದ ಲೆಕ್ಕಗಳನ್ನು ಬಿಡಿಸಲು ಅಸಮರ್ಥನಾಗಿದ್ದಾನೆ ಎಂದು ಹೇಳಲಾಗಿದೆ. ಶೈಕ್ಷಣಿಕವಾಗಿ ಓದು–ಬರಹ ಹಾಗೂ ಲೆಕ್ಕದಲ್ಲಿ ನಾವು ತುಂಬಾ ಹಿಂದೆ ಉಳಿದಿದ್ದೇವೆ. ಅಂದರೆ ಶಿಕ್ಷಣದ ಗುಣಮಟ್ಟವು ಉತ್ತಮವಾಗಿಲ್ಲ, ಕಲಿಕಾ ಪ್ರಕ್ರಿಯೆಯು ತುಂಬಾ ಕಳಪೆಯಾಗಿದೆ. ವಿದ್ಯಾರ್ಥಿಗಳ ತಿಳುವಳಿಕೆ ಮಟ್ಟ ತುಂಬಾ ಕಳಪೆಯಾಗಿದೆ. ಈ ಶಿಕ್ಷಣ ಸತ್ಯಾಂಶಗಳ ಮೇಲೆಯೇ ಈ ನೀತಿಯು ಕೇಂದ್ರೀಕೃತವಾಗಿದೆ. ಆದ್ದರಿಂದ ಈ ನೀತಿಯ ಮೂಲ ಬೇಡಿಕೆಯು ಹೇಗೆ ವಿದ್ಯಾರ್ಥಿಯ ತಿಳುವಳಿಕೆ ಮಟ್ಟವನ್ನು ಹೆಚ್ಚಿಸಬೇಕು, ತಿಳುವಳಿಕೆಯನ್ನು ಹೇಗೆ ಬೆಳೆಸಬೇಕು, ಪರಿಕಲ್ಪನೆಗಳನ್ನು ತಿಳಿದುಕೊಳ್ಳುವುದು, ನಿರ್ಣಾಯಕ/ವಿಮರ್ಶಾತ್ಮಕ ಅರ್ಥೈಸಿಕೊಳ್ಳುವಿಕೆ, ತಾರ್ಕಿಕ ಯೋಚನಾ ಶಕ್ತಿ, ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ, ಕೌಶಲ್ಯಾಭಿವೃದ್ಧಿ, ಮೌಲ್ಯ ಶಿಕ್ಷಣದ ಮೇಲೆ ಆಧರಿತವಾಗಿದೆ.

(ಮುಂದಿನ ಸಂಚಿಕೆಗೆ...)

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-09-2020 Date of Posting 20h or 21st of every month Posted at Periodical Rate

# ಹೊಸ ಶಿಕ್ಷಣ ನೀತಿ ವಿಚಾರ ಸಂಕಿರಣ
# ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಸಹಕಾರಿ

‘ಆತ್ಮನಿರ್ಭರ ಭಾರತ’ ನಿರ್ಮಾಣಕ್ಕೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪೂರಕವಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಶಾಸಕ ನೆಹರು ಓಲೇಕಾರ ಅಭಿಪ್ರಾಯಪಟ್ಟರು.



ನಗರದ ಗುರುಭವನದಲ್ಲಿ ರಾಜ್ಯ ಪದವಿ ಪೂರ್ವ ಮಹಾವಿದ್ಯಾಲಯಗಳ ನೌಕರರ ಸಂಘದ ಜಿಲ್ಲಾ ಘಟಕ, ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಜಿಲ್ಲಾ  ಘಟಕದ ವತಿಯಿಂದ ಸೋಮವಾರ ಏರ್ಪಡಿಸಿದ್ದ ರಾಷ್ಟ್ರೀಯ ಹೊಸ ಶಿಕ್ಷಣ ನೀತಿ–2019ರ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೂರರಿಂದ ಹದಿನೆಂಟು ವರ್ಷ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವ ಉದ್ದೇಶವನ್ನು ಹೊಸ ಶಿಕ್ಷಣ ನೀತಿ ಹೊಂದಿದೆ. ಜ್ಞಾನ ಮಾತ್ರವಲ್ಲದೆ ಸ್ವಾವಲಂಬಿ ಜೀವನಕ್ಕೆ ಬೇಕಾದ ಕೌಶಲ್ಯಗಳನ್ನು ಕಲಿಸಲು ಪ್ರೇರಕವಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ ಮಾತನಾಡಿ ಭಾರತ ಕೇಂದ್ರಿತ ವ್ಯವಸ್ಥೆಯೊಂದಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ಸಮಾಜವನ್ನು ಒಂದು ಸುಸ್ಥಿತ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮಹತ್ವದ್ದಾಗಿದೆ. ವಿಶ್ವದ ಇಂದಿನ ಅಗತ್ಯಗಳಿಗೆ ತಕ್ಕಂತೆ ನಮ್ಮ ಶಿಕ್ಷಣ ಕ್ರಮಗಳಲ್ಲಿ ಬದಲಾವಣೆಯಾಗಬೇಕಾದ ಅವಶ್ಯವಿತ್ತು ಎಂದು ತಿಳಿಸಿದರು.

ವಿಶೇಷ ಉಪನ್ಯಾಸಕ ಸಂದೀಪ ಬೂದಿಹಾಳ ಮಾತನಾಡಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗಿದೆ. ಶಿಕ್ಷಣ ಎಂಬುದು ಕೇವಲ ಹೂಡಿಕೆಯಾಗಬಾರದು. ಇದನ್ನು ಕೇವಲ ವ್ಯವಹಾರ ದೃಷ್ಟಿಯಿಂದ ನೋಡದೆ ಸ್ಪರ್ಧಾತ್ಮಕ ಜಗತ್ತಿಗೆ ಮಕ್ಕಳನ್ನು ತಯಾರಿಸುವ ದೃಷ್ಟಿಯಿಂದ ನೋಡಬೇಕು. ಈ ದೃಷ್ಟಿಯಿಂದ ಹೊಸ ಶಿಕ್ಷಣ ನೀತಿಯಲ್ಲಿ ಒತ್ತು ನೀಡಲಾಗಿದೆ ಎಂದರು.

ಡಿಡಿಪಿಐ ಅಂದಾನೆಪ್ಪ ವಡಗೇರಿ ಮಾತನಾಡಿ, ಶಿಕ್ಷಣದ ಸಮಗ್ರ ಬದಲಾವಣೆ ಪೂರ್ವ ಪ್ರಾಥಮಿಕ ಹಂತದಿಂದಲೇ ಪ್ರಾರಂಭಗೊಳ್ಳುವುದು ಉತ್ತಮ. ಹೊಸ ಶಿಕ್ಷಣ ನೀತಿಯಿಂದ ದೇಶದಲ್ಲಿ ಬಹಳಷ್ಟು ಬದಲಾವಣೆ ತರಲು ಅವಕಾಶವಿದ್ದು, ಇದಕ್ಕೆ ಎಲ್ಲರೂ ಕೈಜೋಡಿಸೋಣ ಎಚಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯ ಸಿದ್ದರಾಜ ಕಲಕೋಟಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಎಸ್.ಎಸ್ ನಿಸ್ಸಿಮಗೌಡ್ರ, ಕೆ.ಪಿ ಬ್ಯಾಡಗಿ, ಪುಕಜೆ ಓಲಾಕಾರ್, ನಾಗರಾಜ ದ್ಯಾಮನಕೊಪ್ಪ, ಎಚ್‌ಡಿ ಗಂಟೇರ ಇದ್ದರು. ಮಲ್ಲಿಕಾರ್ಜುನ ಶಾಂತಗಿರಿ ಕಾರ್ಯಕ್ರಮ ನಿರೂಪಿಸಿದರು.

**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ akss1950@gmail.com Emailಗೆ ಕಳುಹಿಸಿಕೊಡಿ.
ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
‘Keshava Shilpa’, Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, ‘Yadavasmurthi’, 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com